ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ
ಸಂಪರ್ಕ ಇಲಾಖೆ

ಗ್ರಾಮೋದಯ

ಗ್ರಾಮಸ್ವರಾಜ್ಯದ ಹಾದಿಯಲ್ಲಿ



ಕರ್ನಾಟಕ ವಾರ್ತೆ
www.karnatakavarthe.org

ವಾರ್ತಾ ಮತ್ತು ಸಾರ್ವಜನಿಕ
ಸಂಪರ್ಕ ಇಲಾಖೆ

ಗಾಂಧೀಜಿ ಕನಸು
ಕರ್ನಾಟಕದಲ್ಲಿ
ನನಸು

ಗ್ರಾಮೋದಯ

ಗ್ರಾಮಸ್ವರಾಜ್ಯದ ಹಾದಿಯಲ್ಲಿ

ಕರ್ನಾಟಕ ವಾರ್ತೆ
www.karnatakavarthe.org

ಗ್ರಾಮೋದಯ
ಗ್ರಾಮಸ್ವರಾಜ್ಯದ ಹಾದಿಯಲ್ಲಿ

ಪ್ರಥಮ ಮುದ್ರಣ : ಅಕ್ಟೋಬರ್ 2015

ಪುಟಗಳು : 40+4

ಪ್ರಕಾಶಕರು :
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
ವಾರ್ತಾ ಸೌಧ, ಬೆಂಗಳೂರು – 560 001
ದೂ : 080 2202 8001/02
ಇಮೇಲ್ : directorinformation.gov@gmail.com
www.karnatakavarthe.org

ಮುದ್ರಕರು :
ಅಭಿಮಾನಿ ಪಬ್ಲಿಕೇಷನ್ಸ್ ಲಿ.,
ನಂ.2/4, ಡಾ॥ ರಾಜ್‌ಕುಮಾರ್ ರಸ್ತೆ,
ರಾಜಾಜಿನಗರ, ಬೆಂಗಳೂರು – 560 010
ದೂ: 080 23126291
ಇಮೇಲ್: abhimaanigroup@gmail.com

ಸಿದ್ದರಾಮಯ್ಯ
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು – 560 001

ಆತ್ಮೀಯರೆ,

ಗ್ರಾಮ ಸ್ವರಾಜ್ಯ – ಗಾಂಧೀಜಿಯವರ ಅಚ್ಚುಮೆಚ್ಚಿನ ಕಾರ್ಯಕ್ರಮವಾಗಿತ್ತು. ಅವರ ಆಶಯದಂತೆ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಸಮರ್ಥವಾಗಿ ಜಾರಿಗೆ ತಂದ ದೇಶದ ಮೊದಲ ರಾಜ್ಯ ಕರ್ನಾಟಕ. ಈ ವ್ಯವಸ್ಥೆಯ ಅಡಿಯಲ್ಲಿ ಸರ್ಕಾರ ಹಲವಾರು ಜನಪರ ಕಾರ್ಯಕ್ರಮಗಳನ್ನು ರೂಪಿಸಿದೆ.

ಗ್ರಾಮಗಳ ವಿಕಾಸಕ್ಕೆ 21 ಅಂಶಗಳ ಹೊಸ ಸೂತ್ರವನ್ನು ಜಾರಿಗೆ ತಂದಿದೆ. ಗ್ರಾಮಕ್ಕೊಂದು ಆಟದ ಮೈದಾನ; ರುದ್ರಭೂಮಿ ನಿರ್ಮಾಣ; ಧಾನ್ಯಗಳ ಒಕ್ಕಲು ಕಣ; ಬಯಲು ರಂಗಮಂದಿರ; ನಾಗರೀಕ ಸೇವಾಕೇಂದ್ರ; ನಮ್ಮ ಹಳ್ಳಿ – ನಮ್ಮ ನೀರು; ನಮ್ಮ ಹೊಲ – ನಮ್ಮ ದಾರಿ; ನಮ್ಮೂರ ಕೆರೆ; ಮನೆಗೊಂದು ಶೌಚಾಲಯ ಇತ್ಯಾದಿ ಯೋಜನೆಗಳು ಹಳ್ಳಿಗಳ ಜನರ ಬದುಕನ್ನು ಹಸನಾಗಿಸಿವೆ. ಕಳೆದ ಎರಡು ವರ್ಷಗಳಲ್ಲಿ 17 ಲಕ್ಷ ವೈಯಕ್ತಿಕ ಶೌಚಾಲಯಗಳನ್ನು ನಿರ್ಮಿಸುವ ಮೂಲಕ, ರಾಜ್ಯವು ಇಡೀ ದೇಶದಲ್ಲೇ ಅದ್ವಿತೀಯ ಸಾಧನೆಯನ್ನು ಮಾಡಿದೆ. 1.5 ಲಕ್ಷ ಶೌಚಾಲಯದ ಜೊತೆಗೆ ಸ್ನಾನದ ಮನೆಗಳಿಂದ ಕೂಡಿರುವ 'ಗ್ರಾಮೀಣ ಗೌರವ' ಯೋಜನೆಯಡಿ ಸರ್ಕಾರವು ಬಚ್ಚಲು ಮನೆಯನ್ನು ಒಳಗೊಂಡಿರುವಂತಹ 1.5 ಲಕ್ಷ ಶೌಚಾಲಯಗಳನ್ನು ನಿರ್ಮಿಸುತ್ತಿದೆ. ಗ್ರಾಮೀಣ ಭಾಗದ ಜನರ ಬದಕುನ್ನು ಹಸನುಗೊಳಿಸುವ ದಿಶೆಯಲ್ಲಿ ನಮ್ಮ ಸರ್ಕಾರವು ದಿಟ್ಟ ಹೆಜ್ಜೆಗಳನ್ನು ಇಟ್ಟಿದೆ.

ಕರ್ನಾಟಕದ ಸಮಸ್ತ ಜನತೆಗೆ ಗಾಂಧೀ ಜಯಂತಿಯ ಶುಭ ಕಾಮನೆಗಳು.

ಜೈಹಿಂದ್, ಜೈಕರ್ನಾಟಕ

(ಸಿದ್ದರಾಮಯ್ಯ)

ಎಚ್.ಕೆ. ಪಾಟೀಲ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್‌ರಾಜ್ ಸಚಿವರು.

ವಿಧಾನಸೌಧ
ಬೆಂಗಳೂರು – 560 001

ಆತ್ಮೀಯರೆ,

ಅಧಿಕಾರ ವಿಕೇಂದ್ರಿಕರಣವನ್ನು ವ್ಯವಸ್ಥಿತವಾಗಿ ರಾಜ್ಯದಲ್ಲಿ ಜಾರಿಗೆ ತಂದ ಶ್ರೇಯಸ್ಸು ಕರ್ನಾಟಕಕ್ಕೆ ಸಲ್ಲುತ್ತದೆ. ಗ್ರಾಮೀಣ ಬದುಕಿನಲ್ಲಿ ಗುಣಾತ್ಮಕ ಬದಲಾವಣೆ ತರುವ, ಹಳ್ಳಿಗರ ಬದುಕಿಗೆ ಸಮೀಪವಿರುವ, ಗ್ರಾಮೀಣ ಬದುಕಿನ ದೈನಂದಿನ ಅವಶ್ಯಕತೆಗಳನ್ನು ಪೂರೈಸುವ ಅನೇಕ ಯೋಜನೆಗಳನ್ನು ನಮ್ಮ ಸರ್ಕಾರ ಜಾರಿಗೆ ತಂದಿದೆ.

ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಹಲವಾರು ಪ್ರಥಮಗಳನ್ನು ಸಾಧಿಸಿದ ಮುಂಚೂಣಿ ರಾಜ್ಯವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ವೈಯಕ್ತಿಕ ಶೌಚಾಲಯಗಳ ನಿರ್ಮಾಣದಲ್ಲಿ ಕರ್ನಾಟಕವೇ ರಾಷ್ಟ್ರದಲ್ಲಿ ಮುಂಚೂಣಿಯಲ್ಲಿದೆ. ಪಂಚಾಯತ್ ರಾಜ್ ಸಂಸ್ಥೆಗಳಿಗೆ ಹಣಕಾಸು ಹಂಚಿಕೆ ಮತ್ತು ವಿತರಣೆಯಲ್ಲಿ ಮೂರು ವಿವಿಧ ಪ್ರಶಸ್ತಿಗಳನ್ನು ಕರ್ನಾಟಕ ಸರ್ಕಾರ ಪಡೆದಿದೆ.

ಗ್ರಾಮೀಣ ಭಾಗದ ಜನರಿಗೆ ಶುದ್ಧ ಕುಡಿಯುವ ನೀರು, ಮನೆಗೊಂದು ಶೌಚಾಲಯ, ಗ್ರಾಮಕ್ಕೊಂದು ಆಟದ ಮೈದಾನ, ಸ್ಮಶಾನ, ಕುರಿ ದೊಡ್ಡಿ, ದನದದೊಡ್ಡಿ, ರೈತರ ಕಣ, ಕೌಶಲ್ಯಾಭಿವೃದ್ಧಿ, ಭೂ ಅಭಿವೃದ್ಧಿ, ನಿರುದ್ಯೋಗಿಗಳಿಗೆ ಉದ್ಯೋಗ ಸೃಷ್ಟಿ ನೀಡುವ ಸಂಕಲ್ಪದಿಂದ ಸ್ಥಳೀಯ ಸ್ವಯಂ ಆಡಳಿತ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಮಾಡುವ ದಿಸೆಯಲ್ಲಿ ನಮ್ಮ ಸರ್ಕಾರ ಶ್ರಮಿಸುತ್ತಿದೆ.

ಗ್ರಾಮೀಣ ಅಭಿವೃದ್ಧಿಗಾಗಿ ಎಲ್ಲರ ಸಹಕಾರ, ಪಾಲ್ಗೊಳ್ಳುವಿಕೆ ಅತ್ಯಗತ್ಯ. ಗಾಂಧೀಜಿಯ ಕನಸು ನನಸಾಗಿಸಲು ತಾವೆಲ್ಲಾ ಸಹಕರಿಸಿ, ಪಾಲ್ಗೊಳ್ಳಿ.

ಕರ್ನಾಟಕದ ಸಮಸ್ತ ಜನತೆಗೆ ಗಾಂಧೀ ಜಯಂತಿಯ ಶುಭಾಶಯಗಳು

ಜೈಹಿಂದ್, ಜೈಕರ್ನಾಟಕ

(ಎಚ್.ಕೆ. ಪಾಟೀಲ)

ಆರ್. ರೋಷನ್ ಬೇಗ್
ಮೂಲಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು
ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಸಚಿವರು.

ವಿಕಾಸಸೌಧ
ಬೆಂಗಳೂರು – 560 001

ಆತ್ಮೀಯರೆ,

ಗ್ರಾಮೀಣ ಭಾಗದ ಜನರ ಉತ್ತಮ ಜೀವನಕ್ಕಾಗಿ ಅತ್ಯುತ್ತಮವಾದ ಮೂಲಭೂತ ಸೌಲಭ್ಯಗಳನ್ನು ನಮ್ಮ ಸರ್ಕಾರ ಕಲ್ಪಿಸಿಕೊಡುತ್ತಿದೆ. ಇದರಿಂದಾಗಿ ಹಳ್ಳಿಗಳ ರಸ್ತೆಗಳು ಉತ್ತಮಗೊಂಡಿವೆ. ಮನೆಗೊಂದು ವೈಯಕ್ತಿಕ ಶೌಚಾಲಯ ನಿರ್ಮಾಣವಾಗುತ್ತಿವೆ. ಮನೆ ಮುಂದೆ ನಲ್ಲಿ ನೀರು ದೊರೆಯುತ್ತಿದೆ. ಬೆಳೆಗಳನ್ನು ದಾಸ್ತಾನು ಮಾಡಲು ಉಗ್ರಾಣಗಳು ನಿರ್ಮಾಣಗೊಂಡಿವೆ. ಒಕ್ಕಲು ಕಣಗಳ ನಿರ್ಮಾಣ, ಆಟದ ಮೈದಾನ, ಸಮುದಾಯ ಭವನಗಳು ತಲೆಎತ್ತಿವೆ. ಗ್ರಾಮ ವಾಸಿಗಳಿಗೆ ಅಗತ್ಯವಾದ ಈ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿಕೊಡುವ ಮೂಲಕ ನಮ್ಮ ಸರ್ಕಾರ ಅವರ ಜೀವನಮಟ್ಟವನ್ನು ಮೇಲೆತ್ತಲು ಪ್ರಯತ್ನಿಸುತ್ತಿದೆ.

ಅಶುದ್ಧ ನೀರಿನಿಂದಾಗಿ ಗ್ರಾಮೀಣ ಭಾಗದ ಜನರು ಅನೇಕ ರೋಗಗಳಿಗೆ ಒಳಗಾಗುತ್ತಾರೆ. ಇದನ್ನು ಅರಿತಿರುವ ಸರ್ಕಾರ ಜನರಿಗೆ ಶುದ್ಧ ಕುಡಿಯುವ ನೀರನ್ನು ಕಡಿಮೆ ಬೆಲೆಗೆ ನೀಡಲು 7000 ನೀರಿನ ಘಟಕಗಳನ್ನು ಸ್ಥಾಪಿಸುತ್ತಿದೆ. ಈ ಪೈಕಿ 1000ಕ್ಕೂ ಹೆಚ್ಚು ಶುದ್ಧ ನೀರಿನ ಘಟಕಗಳು ಗ್ರಾಮೀಣ ಭಾಗದ ಜನರಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸುತ್ತಿವೆ.

ಗ್ರಾಮೀಣ ವಲಯವನ್ನು ಆದ್ಯತಾ ವಲಯವನ್ನಾಗಿ ಪರಿಗಣಿಸಿರುವ ನಮ್ಮ ಸರ್ಕಾರ, ಗ್ರಾಮಗಳು ಮತ್ತು ಇಲ್ಲಿನ ಗ್ರಾಮವಾಸಿಗಳ ಅಭ್ಯುದ್ಯಯಕ್ಕಾಗಿ ಅಗತ್ಯವಿರುವ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಲು ಬದ್ಧವಾಗಿದೆ.

ಕರ್ನಾಟಕದ ಸಮಸ್ತ ಜನತೆಗೆ ಗಾಂಧೀ ಜಯಂತಿಯ ಶುಭಾಶಯಗಳು

ಜೈಹಿಂದ್, ಜೈಕರ್ನಾಟಕ

(ಆರ್ ರೋಷನ್ ಬೇಗ್)

ಗ್ರಾಮ ವಾಕ್ಯ

ಕರ್ನಾಟಕ ಗ್ರಾಮೀಣಾಭಿವೃದ್ಧಿ ಕಲ್ಪನೆಯ ಮರುವ್ಯಾಖ್ಯಾನ

ಅಪಾರ ಜನಪರ ಕಾಳಜಿ, ಗುಣಾತ್ಮಕ ಕಾರ್ಯಕ್ರಮಗಳ ಅನುಷ್ಠಾನ, ರಾಜ್ಯದ ದೈನಂದಿನ ಬದುಕಿನಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ ಸೂಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂಬ ಸದಾಶಯದೊಂದಿಗೆ ರಾಜ್ಯದಲ್ಲಿ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ 2013ರ ಮೇ ತಿಂಗಳಲ್ಲಿ ಅಧಿಕಾರಕ್ಕೆ ಬಂದಿತು. ಈ ಸರ್ಕಾರ ರಾಜ್ಯದ ಅಭಿವೃದ್ಧಿಯ ಚಿಂತನೆಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಿ ಮೈಲಿಗಲ್ಲುಗಳನ್ನು ಸ್ಥಾಪಿಸಿದೆ.

ರಾಜ್ಯದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯು ಅನುಷ್ಠಾನಕ್ಕೆ ಬಂದು 22 ವರ್ಷಗಳಾಗಿವೆ. ರಾಷ್ಟ್ರದ ಪ್ರಜಾಸತ್ತೆಗೆ ಮೂಲ ಅಡಿಪಾಯ ಒದಗಿಸುವ ಪಂಚಾಯತ್‌ರಾಜ್ ಸಂಸ್ಥೆಗಳ ವಿಕೇಂದ್ರಿಕರಣದ ನಿಜವಾದ ಫಲಗಳನ್ನು ಉದ್ದೇಶಿತ ಸಂಸ್ಥೆಗಳಿಗೆ ಪರಿಣಾಮಕಾರಿಯಾಗಿ ತಲುಪಿಸುವ ಗುರುತರ ಜವಾಬ್ದಾರಿ ಕರ್ನಾಟಕ ಸರ್ಕಾರದ ಮುಂದಿತ್ತು. ಅಭಿವೃದ್ಧಿಯ ನೈಜ ಕಲ್ಪನೆ ಶೈಶವಾವಸ್ಥೆಯಲ್ಲಿತ್ತು. ಹಳ್ಳಿಗನ ಬೇಕು – ಬೇಡುಗಳನ್ನು ನೈಜ ಅರ್ಥದಲ್ಲಿ ಪರಿಗಣಿಸಿ ಅವುಗಳನ್ನು ಒದಗಿಸುವ ಕಲ್ಪನೆ ಚಿಗುರೊಡೆದಿದ್ದು ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆಯೇ.

ಈ ಎಲ್ಲಾ ಹಿನ್ನೆಲೆಯಲ್ಲಿ ಕರ್ನಾಟಕದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕ್ರಾಂತಿಯ ಹೊಸ ಪರ್ವವನ್ನೇ ಆರಂಭಿಸುವ ಸಂಕಲ್ಪ ಮಾಡಲಾಯಿತು.

ಗ್ರಾಮೀಣ ಬದುಕಿನಲ್ಲಿ ಗುಣಾತ್ಮಕ ಬದಲಾವಣೆ ತರುವ, ಹಳ್ಳಿಗರ ಬದುಕಿಗೆ ಸಮೀಪವಿರುವ ಗ್ರಾಮೀಣ ಬದುಕಿನ ದೈನಂದಿನ ಅವಶ್ಯಕತೆಗಳನ್ನು ಪೂರೈಸುವ 15 ಅಂಶಗಳ ಕಾರ್ಯಕ್ರಮಗಳನ್ನು ಸರ್ಕಾರವು ಅಧಿಕಾರಕ್ಕೆ ಬಂದ 2 ತಿಂಗಳಲ್ಲಿಯೇ ಅನುಷ್ಠಾನಗೊಳಿಸಲಾಯಿತು. ಗ್ರಾಮೀಣ ಬದುಕಿನಲ್ಲಿ ಹಾಸು ಹೊಕ್ಕಾಗಿರುವ ಜಾನುವಾರುಗಳ ಜೊತೆ ಹಳ್ಳಿಗನ ಬದುಕಿಗೆ ಆಸರೆ ನೀಡಿ ಸಮರ್ಥನೀಯ ಮತ್ತು ಸಮರ್ಪಕ ಜೀವನಮಟ್ಟ ಒದಗಿಸಲು ಚಿಂತಿಸಲಾಯಿತು. ಗ್ರಾಮೀಣ ಬದುಕಿನಲ್ಲಿ ಪ್ರತಿ ಮನೆಗೆ, ಕುರಿ/ದನದ ದೊಡ್ಡಿ ನಿರ್ಮಾಣಕ್ಕೆ ಅವಕಾಶ ಕಲ್ಪಿಸುವ ಕೊಟ್ಟಿಗೆ ನಿರ್ಮಾಣ ಕಾರ್ಯಕ್ರಮ ಜಾರಿಗೊಳಿಸಲಾಯಿತು. ಮನೆಗೊಂದು ಶೌಚಾಲಯ ನಿರ್ಮಾಣ ಕಾರ್ಯಕ್ರಮ ಪರಿಣಾಮಕಾರಿಯಾಗಿ ಮತ್ತು ಆಂದೋಲನ ರೂಪದಲ್ಲಿ ಅನುಷ್ಠಾನಗೊಂಡಿದೆ.

ಶುದ್ಧ ಕುಡಿಯುವ ನೀರಿಗಾಗಿ ಶುದ್ಧ ಕುಡಿಯುವ ನೀರಿನ ಘಟಕಗಳ ಕಾರ್ಯಕ್ರಮ ಸರ್ಕಾರದ ವತಿಯಿಂದ ಗ್ರಾಮೀಣ ಭಾಗಕ್ಕೆ ವಿಸ್ತಾರಗೊಂಡಿವೆ. ಇಂದು ಸಾವಿರಾರು ಹೆಚ್ಚು ಶುದ್ಧ ಕುಡಿಯುವ ನೀರಿನ ಘಟಕಗಳು ಹಳ್ಳಿಗಳಲ್ಲಿ ಸ್ಥಾಪನೆಯಾಗಿವೆ. ಇನ್ನೂ 6000 ಶುದ್ಧ ಕುಡಿವ ನೀರಿನ ಘಟಕಗಳನ್ನು ಸ್ಥಾಪಿಸಲಾಗುತ್ತಿದೆ. ಒಟ್ಟಿನಲ್ಲಿ ರಾಜ್ಯದ ಗ್ರಾಮೀಣ ಭಾಗದಲ್ಲಿ ಮೊಟ್ಟ ಮೊದಲ ಬಾರಿಗೆ, ವಿಶಿಷ್ಟವಾದ ಸಂಚಲನ ಮೂಡಿಸಿದ್ದು ಸಮಾದಾನ ತಂದಿದೆ.

ಕುಡಿಯುವ ನೀರು, ನೈರ್ಮಲ್ಯ, ಉತ್ತಮವಾದ ರಸ್ತೆ,

ಗ್ರಾಮೀಣ ಜೀವನದಲ್ಲಿ ವ್ಯವಸ್ಥಿತ ಉದ್ಯೋಗ ಸೃಷ್ಟಿ, ಅಧಿಕಾರಯುತವಾದ ಮತ್ತು ಬಲವಾದ ಸ್ಥಳೀಯ ಸ್ವಯಂ ಆಡಳಿತ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಜ್ಯದಲ್ಲಿ ತ್ವರಿತಗತಿಯ ಕಾರ್ಯಕ್ರಮಗಳನ್ನು ಆದ್ಯತಾ ಕಾರ್ಯಕ್ರಮಗಳೆಂದು ಸರ್ಕಾರ ಪರಿಗಣಿಸಿ, ಈ ದಿಶೆಯಲ್ಲಿ ಕಾರ್ಯೋನ್ಮುಖವಾಗಿದೆ.

ರಾಜ್ಯದಲ್ಲಿ ನೈರ್ಮಲ್ಯದ ವ್ಯವಸ್ಥೆಯು ಸಂಪೂರ್ಣವಾಗಿ ಕುಸಿದುಹೋಗಿತ್ತು. 85 ಲಕ್ಷ ಗ್ರಾಮೀಣ ಕುಟುಂಬಗಳಲ್ಲಿ 30 ಲಕ್ಷ ಕುಟುಂಬಗಳಿಗೆ ಮಾತ್ರ ವೈಯಕ್ತಿಕ ಶೌಚಾಲಯದ ವ್ಯವಸ್ಥೆ ಲಭ್ಯವಿತ್ತು. ಈ ಸರ್ಕಾರ ಅಧಿಕಾರದ ಚುಕ್ಕಾಣಿ ಹಿಡಿದಾಗ ಇನ್ನೂ 55 ಲಕ್ಷ ವೈಯಕ್ತಿಕ ಶೌಚಾಲಯಗಳನ್ನು ನಿರ್ಮಿಸಬೇಕಾದ ಬಹುದೊಡ್ಡ ಸವಾಲು ಸರ್ಕಾರದ ಎದುರಿಗಿತ್ತು. ಈ ಪೈಕಿ ಸರಾಸರಿ 15 ಲಕ್ಷ ಶೌಚಾಲಯಗಳನ್ನು ನಿರ್ಮಿಸಿದ ಖ್ಯಾತಿ ಕರ್ನಾಟಕದ ಇಂದಿನ ಸರ್ಕಾರದ್ದಾಗಿದೆ.

ವೈಯಕ್ತಿಕ ಶೌಚಾಲಯಗಳ ನಿರ್ಮಾಣದಲ್ಲಿ ಕರ್ನಾಟಕವೇ ರಾಷ್ಟ್ರದಲ್ಲಿ ಮುಂಚೂಣಿಯಲ್ಲಿದೆ. ಪಂಚಾಯತ್ ರಾಜ್ ಸಂಸ್ಥೆಗಳಿಗೆ ಹಣಕಾಸು ಹಂಚಿಕೆ ಮತ್ತು ವಿತರಣೆಯಲ್ಲಿ 3 ವಿವಿಧ ಪ್ರಶಸ್ತಿಗಳನ್ನು ಕರ್ನಾಟಕ ಸರ್ಕಾರ ಪಡೆದಿದೆ. ವಾಸ್ತವಿಕವಾಗಿ ಕರ್ನಾಟಕ ರಾಜ್ಯದಲ್ಲಿ ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಹಲವಾರು ಪ್ರಥಮಗಳನ್ನು ಸಾಧಿಸಿದ ಮುಂಚೂಣಿ ರಾಜ್ಯವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಮಹಾತ್ಮಾ ಗಾಂಧೀ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಫಲಾನುಭವಿಗಳ ಖಾತೆಗೆ ನೇರ ಹಣ ವರ್ಗಾವಣೆ ಮಾಡಲು ನೈಜವಾದ ಕ್ರಮ ಕೈಗೊಳ್ಳಲು ವಿದ್ಯುನ್ಮಾನ ಹಣಕಾಸು ನಿರ್ವಹಣಾ ವ್ಯವಸ್ಥೆಯನ್ನು (ಇಎಫ್‌ಎಂಎಸ್) 2013ರ ಜುಲೈ 1 ರಿಂದಲೇ ಜಾರಿಗೆ ತಂದು ಈ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಿದ ಮೊದಲ ರಾಜ್ಯ ಎನಿಸಿಕೊಂಡಿತು.

ಇಲ್ಲಿಯವರೆಗೆ ಶುದ್ಧ ಕುಡಿಯುವ ನೀರು (ಪ್ಯೂರಿಫೈಡ್ ವಾಟರ್) ಹೋಗಲಿ ಕನಿಷ್ಠ ಸ್ವಚ್ಛ ಕುಡಿಯವ ನೀರಿನ ಪೂರೈಕೆಯಿಂದ ದೂರ ಉಳಿದಿದ್ದ ಕುಡಿಯುವ ನೀರಿಗೆ ಹಾಹಾಕಾರವಿದ್ದ ಬಹುದೊಡ್ಡ ಸವಾಲನ್ನು ರಾಜ್ಯ ಸರ್ಕಾರ ಎದುರಿಸುತ್ತಿತ್ತು. ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರನ್ನು ಪೂರೈಸುವ ವ್ಯವಸ್ಥೆಗಳು ತಾತ್ಕಾಲಿಕ ಮತ್ತು ತೇಪೆ ಹಚ್ಚುವ ವ್ಯವಸ್ಥೆಗಳೆನಿಸಿ ಪರಿಣಾಮಕಾರಿ ಅನುಷ್ಠಾನದಿಂದ ವಂಚಿತವಾಗಿದ್ದವು. ಕುಡಿಯುವ ನೀರಿನ ಸಮಸ್ಯೆಯು ಬೃಹದಾಕಾರವಾಗಿ ಬೆಳೆದು ನಿಂತಿತ್ತು. ಮೊದಲ ಹಂತದಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಸಮಗ್ರವಾಗಿ ಪರಿಹರಿಸುವತ್ತ ಪರಿಣಾಮಕಾರಿ ಕಾರ್ಯಕ್ರಮಗಳನ್ನು ಜಾರಿಗೆ ತರಲು ಸರ್ಕಾರದ ಹಂತದಲ್ಲಿ ಪ್ರವೃತ್ತಿಯ ಬದಲಾವಣೆ ಕಾರ್ಯಕ್ಕೆ ಕೈ ಹಾಕಲಾಯಿತು.

ಗ್ರಾಮೀಣ ಭಾಗದ ಕುಡಿಯುವ ನೀರಿನ ಸಮಸ್ಯೆಯನ್ನು ಒಟ್ಟಾರೆಯಾಗಿ ಪರಿಹರಿಸಲು ರಾಜ್ಯ ಸರ್ಕಾರ ರಾಜ್ಯದ ಗ್ರಾಮೀಣ ಭಾಗಕ್ಕೆ ಅಗತ್ಯವಿರುವ ಕುಡಿಯುವ ನೀರಿನ ಸಮಸ್ಯೆಯನ್ನು ಅಧ್ಯಯನ ಮಾಡಿ ಒಟ್ಟು ಅವಶ್ಯಕತೆಯನ್ನು ಸಮೀಕ್ಷೆಯ ಮೂಲಕ ಕಂಡುಕೊಳ್ಳಲಾಯಿತು. ಈ ಸಮೀಕ್ಷೆಯಂತೆ ರಾಜ್ಯದ ಗ್ರಾಮೀಣ ಭಾಗದ ಕುಡಿಯುವ ನೀರಿನ ಅವಶ್ಯಕತೆಗಳನ್ನು ಪೂರ್ತಿಗೊಳಿಸಲು ಒಟ್ಟು 62 ಟಿ.ಎಂ.ಸಿ ನೀರು ಅಗತ್ಯವಿದೆ. ಈ ಕಾರ್ಯಕ್ರಮಕ್ಕೆ 45,000 ಕೋಟಿ ರೂಗಳ ಬಂಡವಾಳದ ಅವಶ್ಯಕತೆ ಇದೆ ಎಂಬುದನ್ನು ತಾಂತ್ರಿಕ ಸಮೀಕ್ಷೆಯ ಮೂಲಕ ಮನಗಾಣಲಾಯಿತು. ಈ ದಿಸೆಯಲ್ಲಿ ಕಾರ್ಯಕ್ರಮಗಳನ್ನು ರೂಪಿಸುವ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ಸಮರ್ಪಕವಾಗಿ, ಪರಿಣಾಮಕಾರಿಯಾಗಿ ಜಾರಿಗೊಳಿಸುವ ನಿಟ್ಟಿನಲ್ಲಿ ಸರ್ಕಾರ ದೃಢ ಹೆಜ್ಜೆಗಳನ್ನಿಡುತ್ತಿದೆ.

ಮಹಾತ್ಮಾ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ರೈತಾಪಿ ವರ್ಗದ ಮೊಗದಲ್ಲಿ ಸಂತಸ ಮೂಡಿಸುವ "ರೈತರ ಭೂ ಅಭಿವೃದ್ಧಿ", "ನಮ್ಮ ಹೊಲ ನಮ್ಮ ದಾರಿ", "ನಮ್ಮೂರ ಕೆರೆ", "ರೈತರ ಕಣ" ಕಾರ್ಯಕ್ರಮಗಳು ರೈತನ ಪಾಲಿಗೆ ಊರುಗೋಲಾಗಿ ಪರಿಣಮಿಸಿವೆ. ಉಳುವವನ ಊರುಗೋಲು ಕಿತ್ತು ಉಳ್ಳವನಿಗೆ ನೀಡುವ ಇಂದಿನ ಕಾಲದಲ್ಲಿ, ರೈತನ ಪಾಲಿಗೆ ಈ

ಕಾರ್ಯಕ್ರಮಗಳು ನಿಜಕ್ಕೂ ಆಧಾರಸ್ತಂಬಗಳಾಗಿ ಪರಿಣಮಿಸಿವೆ. ತನ್ನ ಹೊಲಕ್ಕೊಂದು, ಕೃಷಿ ಹೊಂಡ ಅಥವಾ ಬದುವು ನಿರ್ಮಾಣ ಮಾಡಿಕೊಳ್ಳುವ ರೈತನ ಭೂ ಅಭಿವೃದ್ಧಿ ಕಾಮಗಾರಿಯು ಮಹಾತ್ಮಾ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಭಾಗವಾಗಿ ಕೈಗೊಳ್ಳುತ್ತಿರುವುದು, ರೈತ ತನ್ನ ಹೊಲ ತಲುಪಲು ತಾನು ಬೆಳೆದ ಬೆಳೆಯನ್ನು ಮಾರುಕಟ್ಟೆಗೆ ಸಾಗಿಸಲು ಅಗತ್ಯವಿರುವ ನಮ್ಮ ಹೊಲ, ನಮ್ಮ ದಾರಿ, 12,000 ಕೆರೆಗಳ ಪುನಶ್ಚೇತನದ ಮಹಾತ್ವಾಕಾಂಕ್ಷಿ ಗುರಿ ಹೊಂದಿರುವ ನಮ್ಮೂರ ಕೆರೆ, ಕಾರ್ಯಕ್ರಮ ಗ್ರಾಮೀಣ ಕರ್ನಾಟಕದ ಅಂತರ್ಜಲ ಕೋಷ್ಟಕ (Table)ದಲ್ಲಿ ಮಹತ್ತರ ಬದಲಾವಣೆಗಳನ್ನು ತರಲಿದೆ. ರೈತರು ಉತ್ಪಾದನೆಯನ್ನು ರಾಶಿ ಮಾಡಿಕೊಳ್ಳಲು, ರೈತರಿಗಾಗಿ ಊರಿಗೊಂದು ಕಣ ನಿರ್ಮಾಣ ಮಾಡುವುದು ಇದೇ ಮೊದಲಾದ ಕಾರ್ಯಕ್ರಮಗಳು ಗ್ರಾಮೀಣ ಅಭಿವೃದ್ಧಿ ಇಲಾಖೆಯ ಮಹತ್ವದ ಮೈಲಿಗಲ್ಲುಗಳಾಗಿವೆ.

'ನಮ್ಮ ಹಳ್ಳಿ – ನಮ್ಮ ನೀರು' ಕಾರ್ಯಕ್ರಮದ ಅಡಿಯಲ್ಲಿ, ಕೆರೆಯಿಲ್ಲದ ಊರುಗಳಿಗಾಗಿ ನಿರ್ಮಾಣಗೊಳ್ಳುತ್ತಿರುವ 'ಊರಿಗೊಂದು ಕೆರೆ' ಕಾರ್ಯಕ್ರಮವು ಅಂತರ್ಜಲದ ಮಟ್ಟದ ಕುಸಿತವನ್ನು ತಡೆಯುವಲ್ಲಿ ಪರಿಹಾರೋಪಾಯ ಒದಗಿಸುತ್ತಿದೆ.

ಪ್ರತಿಯೊಂದು ಪಂಚಾಯಿತ್ತಿಯು ಒಂದು ಸುಸಜ್ಜಿತ ಮತ್ತು ಭೌತಿಕ ಸೌಲಭ್ಯಗಳನ್ನು ಒಳಗೊಂಡ ಕಟ್ಟಡ ಹೊಂದಿರಬೇಕು, ಎಂಬ ಕಲ್ಪನೆ ಸಾಕಾರಗೊಳಿಸುವ "ರಾಜೀವ ಗಾಂಧಿ ಸೇವಾ ಕೇಂದ್ರ" ನಿರ್ಮಾಣದಂತಹ ಕಾರ್ಯಕ್ರಮಗಳು, ಗ್ರಾಮೀಣ ಆಡಳಿತಕ್ಕೆ ಗರಿ ಮೂಡಿಸುವ ಕೆಲಸ ಮಾಡುತ್ತಿವೆ.

"ಮನೆಗೊಂದು ಶೌಚಾಲಯ" ಕಾರ್ಯಕ್ರಮದ ಅಡಿಯಲ್ಲಿ 2013–14ರಲ್ಲಿ ಹಮ್ಮಿಕೊಳ್ಳಲಾಗಿದ್ದ 6 ಲಕ್ಷ ವೈಯಕ್ತಿಕ ಶೌಚಾಲಯಗಳ ನಿರ್ಮಾಣದ ಗುರಿಯಲ್ಲಿ 5.05 ಲಕ್ಷ ಶೌಚಾಲಯಗಳು ನಿರ್ಮಾಣಗೊಂಡಿರುವುದು ಮತ್ತು 2014–15ನೇ ಸಾಲಿನಲ್ಲಿ 8 ಲಕ್ಷ ವೈಯಕ್ತಿಕ ಶೌಚಾಲಯಗಳ ನಿರ್ಮಾಣದ ಗುರಿಯಲ್ಲಿ 8.90 ಲಕ್ಷ ಶೌಚಾಲಯಗಳು ನಿರ್ಮಾಣಗೊಂಡಿರುವುದು ಸಾಧನೆಯ ಹಾದಿಯಲ್ಲಿ ದಾಪುಗಾಲನ್ನಿರಿಸಿದಂತಾಗಿದೆ. ಹಳ್ಳಿಗಳಲ್ಲಿ "ಮನೆಗೊಂದು ಶೌಚಾಲಯವಿರಬೇಕು, ಅದು ಬಳಸಲ್ಪಡಬೇಕು" ಎಂಬ ಕಲ್ಪನೆಯನ್ನು ಅನುಷ್ಠಾನಗೊಳಿಸಲು ಆಂದೋಲನಕಾರಿ ಕಾರ್ಯಕ್ರಮ ತ್ವರಿತಗತಿಯಲ್ಲಿ ಆದ್ಯತೆಯ ಮೇರೆಗೆ ಪ್ರಾರಂಭವಾಗಿದೆ. "ಬಯಲು ಬಹಿರ್ದೆಸೆ ನಿವಾರಣೆ, ಶೌಚಾಲಯ ನಿರ್ಮಾಣ ಮತ್ತು ಅವುಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವ ಕೆಲಸಗಳೇ ನಮ್ಮನ್ನು ಸ್ವರಾಜ್ಯಕ್ಕೆ ಅರ್ಹರಾನ್ನಾಗಿಸುತ್ತವೆ" ಎಂಬ ರಾಷ್ಟ್ರಪಿತ ಮಹಾತ್ಮಗಾಂಧಿಯವರ ಹೃದಯಾಂತರಾಳದ ಮಾತಿನ ನೈಜ ಕ್ಷಿತಿಜ ತಲುಪಲು ಇನ್ನೇನು ಕಾಲ ದೂರವಿಲ್ಲ.

ಗ್ರಾಮೀಣ ಭಾಗದ ಪ್ರತಿ ಮನೆಗೆ ಕೇವಲ ಮನೆಗೊಂದು ಶೌಚಾಲಯ ಮಾತ್ರವಲ್ಲ ಅಲ್ಲಿ ಚಕ್ಕಡಿಯ ಗಾಲಿಗೆ ಸೀರೆ ಕಟ್ಟಿ ಮೈದೊಳೆದುಕೊಳ್ಳುವ ಪರಿಸ್ಥಿತಿಯನ್ನು ಬದಲಾಯಿಸಲು, ಗ್ರಾಮೀಣ ಜನರ ಅದರಲ್ಲೂ ಮಹಿಳೆಯರ ಪ್ರಮುಖ ಅವಶ್ಯಕತೆಯಾದ "ಬಚ್ಚಲು ಮನೆ ಸಹಿತ-ಶೌಚಾಲಯ"ದ ನಿರ್ಮಾಣ ಕಾರ್ಯವು "ಗ್ರಾಮೀಣ ಗೌರವ" ಎಂಬ ಹೆಸರಿನಲ್ಲಿ ಪ್ರಸಕ್ತ ವರ್ಷದಿಂದ ಪ್ರಾರಂಭಿಸಲಾಗಿದೆ. ಈ ಕಾರ್ಯಕ್ರಮದ ಅಡಿಯಲ್ಲಿ 1.50 ಲಕ್ಷ ಸ್ನಾನಗೃಹ ಸಹಿತ ಶೌಚಾಲಯಗಳನ್ನು ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ತನ್ಮೂಲಕ ವೈಯಕ್ತಿಕ ಶೌಚಾಲಯಗಳ ನಿರ್ಮಾಣವನ್ನು ಪುನರ್ ವ್ಯಾಖ್ಯಾನಿಸಿ ಗ್ರಾಮೀಣ ಬದುಕಿನಲ್ಲಿ ಗುಣಾತ್ಮಕ ಬದಲಾವಣೆ ತರುವ "ಗ್ರಾಮೀಣ ಗೌರವ" ಯೋಜನೆಯನ್ನು ಜಾರಿಗೆ ತರಲಾಗುತ್ತಿದೆ.

ಹೀಗೆ ಹತ್ತು ಹಲವು ಹತ್ತು ನೈಜ ಕಾರ್ಯಕ್ರಮಗಳನ್ನು ಸರ್ಕಾರವು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮೂಲಕ ಅನುಷ್ಠಾನಗೊಳಿಸಿ ಗ್ರಾಮೀಣಾಭಿವೃದ್ಧಿಯ ಕಲ್ಪನೆಯನ್ನು ಗ್ರಾಮೀಣ ಕರ್ನಾಟಕದ ನೈಜ ಅವಶ್ಯಕತೆಗಳಿಗೆ ಅನುಗುಣವಾಗುವಂತೆ ಮರು ವ್ಯಾಖ್ಯಾನಗೊಳಿಸಿದೆ.

ಅಧ್ಯಾಯ – 1

ಗ್ರಾಮೀಣಾಭಿವೃದ್ಧಿ ಕಲ್ಪನೆಯ ಪುನರ್‌ವ್ಯಾಖ್ಯಾನ

ಗ್ರಾಮೀಣ ಭಾಗದ ಜನತೆ ಗುಣಮಟ್ಟದ ಉತ್ತಮ ಜೀವನ ನಡೆಸಲು ಸಹಾಯಕವಾಗುವಂತೆ ಅತ್ಯುತ್ತಮ ಸಾಮಾಜಿಕ ವ್ಯವಸ್ಥೆ ರೂಪಿಸಲು ಮತ್ತು ಭೌತಿಕ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆ. ಗ್ರಾಮೀಣ ಕರ್ನಾಟಕದ ಪ್ರತಿಯೊಂದು ಮನೆಗೆ ಸುರಕ್ಷಿತ, ಸಮರ್ಪಕ ಮತ್ತು ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು, ವೈಯಕ್ತಿಕ ಮತ್ತು ಮನೆಗೊಂದು ಶೌಚಾಲಯ ನಿರ್ಮಿಸಿ ಉಪಯೋಗಿಸಲು, ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಹಾಗೂ ಸಾಮುದಾಯಿಕ ಶುಚಿ ವಾತಾವರಣ ರಕ್ಷಿಸಲು ಭರವಸೆದಾಯಕ ಕಾರ್ಯಕ್ರಮ ರೂಪಿಸಲಾಗಿದೆ. ಪ್ರತಿಯೊಂದು ಹಳ್ಳಿಯಲ್ಲೂ ತ್ಯಾಜ್ಯ ವಿಲೇವಾರಿಗೆ ತಂತ್ರಜ್ಞಾನ ಬಳಸಿ ಸೌಲಭ್ಯ ಕಲ್ಪಿಸುವುದು. ಪ್ರತಿಯೊಂದು ಗ್ರಾಮಕ್ಕೂ ಮತ್ತು ಗ್ರಾಮಸ್ಥರ ಹೊಲಕ್ಕೂ ಮೋಟಾರು ಸರ್ವಋತು ರಸ್ತೆ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.



ಮಹಾತ್ಮಾಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ (ನರೇಗಾ)

ಗ್ರಾಮೀಣ ಬದುಕಿನಲ್ಲಿ ಅವರು ವಾಸಿಸುವ ಸ್ಥಳದಲ್ಲಿಯೇ ಉದ್ಯೋಗ ಒದಗಿಸುವ ಮಹತ್ವಾಕಾಂಕ್ಷಿ ಉದ್ದೇಶದ ಕಾರ್ಯಕ್ರಮವೇ ಮಹಾತ್ಮಾಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ. ಈ ಕಾರ್ಯಕ್ರಮದ ನೈಜಫಲಗಳ ವರ್ಗಾವಣೆಗಾಗಿ ರಾಜ್ಯ ಸರ್ಕಾರವು ವಿಶಿಷ್ಟವಾದ ಕಾರ್ಯಕ್ರಮಗಳನ್ನು ರೂಪಿಸಿದೆ. 2013–14ನೇ ಸಾಲಿನಲ್ಲಿ ಗ್ರಾಮೀಣ ಬದುಕಿನಲ್ಲಿ ಗುಣಾತ್ಮಕ ಬದಲಾವಣೆ ತರುವ 15 ಅಂಶದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಯಿತು. 2015–16ನೇ ಸಾಲಿನಲ್ಲಿ ಈ ಕಾರ್ಯಕ್ರಮಗಳ ಪಟ್ಟಿಗೆ ಇನ್ನೂ 6 ಕಾರ್ಯಕ್ರಮಗಳನ್ನು ಹೊಸದಾಗಿ ಸೇರಿಸಲಾಯಿತು. ಗ್ರಾಮೀಣ ಪ್ರದೇಶದ ನೈಜ ಅವಶ್ಯಕತೆ ಮತ್ತು ಗ್ರಾಮೀಣ ಬದುಕಿನಲ್ಲಿ ಆಸ್ತಿ ಸೃಜನೆಯ ಕ್ರಮಗಳಿಗೆ ಒತ್ತು ನೀಡುವ ಮೂಲಕ 21 ಅಂಶದ ಕಾರ್ಯಕ್ರಮಗಳ ಅನುಷ್ಠಾನ ಪ್ರಾರಂಭಿಸಿ ಮಹಾತ್ಮಾಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯ ಅನುಷ್ಠಾನವನ್ನು ಪುನರ್ ವ್ಯಾಖ್ಯಾನ ಮಾಡಲಾಯಿತು.

ಗುಣಾತ್ಮಕ ಬದಲಾವಣೆಗಾಗಿ 15+6 ಅಂಶದ ಕಾರ್ಯಕ್ರಮಗಳು:

ಗ್ರಾಮೀಣ ಕರ್ನಾಟಕದ ಬದುಕಿನ ಗುಣಮಟ್ಟವನ್ನು ಉನ್ನತೀಕರಿಸಲು, ಸುಂದರ, ಸಶಕ್ತ, ಸ್ವಾಭಿಮಾನಿ ಮತ್ತು ಸ್ವಾವಲಂಬಿ ಬದುಕನ್ನು ಗ್ರಾಮೀಣ ಕರ್ನಾಟಕದ ಪ್ರತಿಯೊಬ್ಬ ನಾಗರಿಕನು ರೂಪಿಸಿಕೊಳ್ಳಲು ಅವಕಾಶ ಕಲ್ಪಿಸುವುದು ಸರ್ಕಾರದ ಉದ್ದೇಶವಾಗಿದೆ. ಇದಕ್ಕೆ ಅನುವಾಗುವಂತೆ ಕರ್ನಾಟಕ ಸರ್ಕಾರದ ಕಾರ್ಯಕ್ರಮಗಳನ್ನು ಯೋಜಿಸಲು ಮತ್ತು ಅನುಷ್ಠಾನಗೊಳಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಹೊಸ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೆ ಸಂಕಲ್ಪಿಸಿತು. ಗ್ರಾಮೀಣ ಕರ್ನಾಟಕದಲ್ಲಿ ಹಸನಾದ ಭರವಸೆದಾಯಕ ಬದುಕನ್ನು ಹೊಂದುವಂತೆ ಮಾಡುವಲ್ಲಿ ಸಮಗ್ರ ಕಾರ್ಯಕ್ರಮಗಳನ್ನು ಕಲ್ಪಿಸಿ, ರೂಪಿಸಿ ಅನುಷ್ಠಾನಗೊಳಿಸಲಾಗಿದೆ. ಕರ್ನಾಟಕದ ಪ್ರತಿಯೊಂದು ಹಳ್ಳಿಯನ್ನು ತ್ಯಾಜ್ಯ ಮುಕ್ತ, ವ್ಯಾಜ್ಯ ಮುಕ್ತ, ಋಣ ಮುಕ್ತ, ಬಯಲು ಬಹಿರ್ದೆಸೆ ಮುಕ್ತ ಮತ್ತು ಭಯ ಮುಕ್ತ ರಾಜ್ಯವನ್ನಾಗಿ ಬದಲಾಯಿಸಲು ತನ್ಮೂಲಕ ಕರ್ನಾಟಕದ ನಾಗರೀಕರಿಗೆ ನಿರ್ದಿಷ್ಟ ಕಾಲಮಿತಿಯಲ್ಲಿ ಕಾರ್ಯಕ್ರಮಗಳ ಅನುಷ್ಠಾನವನ್ನು ಸುನಿಶ್ಚಿತಗೊಳಿಸಿದ ಪ್ರಥಮ ರಾಜ್ಯವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಗ್ರಾಮೀಣ ಕರ್ನಾಟಕದ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಹಾಗೂ ಜೀವಾಳವೆನಿಸಿರುವ ದನ, ಕರು ಮತ್ತು ಇತರ ಪಶುಗಳಿಗೆ ಇರಲು ಸುರಕ್ಷಿತ ವ್ಯವಸ್ಥೆ ಇರಬೇಕೆಂಬ ಉದ್ದೇಶ ಸಾಕಾರಗೊಳಿಸಲು ಕುರಿ ಮತ್ತು ದನದ ದೊಡ್ಡಿಗಳ ನಿರ್ಮಾಣ ಕಾರ್ಯವನ್ನು ನರೇಗಾ (ಮಹಾತ್ಮಾಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ) ಅಡಿಯಲ್ಲಿ ಕೈಗೆತ್ತಿಕೊಂಡ ಮೊದಲ ರಾಜ್ಯ ಕರ್ನಾಟಕ.

ಕೃಷಿ ಭೂಮಿಗೆ ಅಂದರೆ ನಮ್ಮ ಹೊಲಕ್ಕೆ/ಹಳ್ಳಿಗೆ ಹೋಗಲು ಮತ್ತು ಬರಲು ಸರ್ವಋತುಗಳ ಸಂಪರ್ಕ ವ್ಯವಸ್ಥೆಯನ್ನು ಕಲ್ಪಿಸಲು ಆದ್ಯತೆಯ ಕಾರ್ಯಕ್ರಮವನ್ನು ನಮ್ಮ ಹೊಲ ನಮ್ಮ ದಾರಿ ಯೋಜನೆಯನ್ವಯ ಕೈಗೆತ್ತಿಕೊಳ್ಳಲಾಯಿತು. ರಸ್ತೆ ಸಂಪರ್ಕದ ಕೊರತೆ ಇರುವ ಗ್ರಾಮಗಳಿಗೆ ಗುಣಮಟ್ಟದ ರಸ್ತೆ ಸಂಪರ್ಕ ಕಲ್ಪಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗಿದೆ. ಗ್ರಾಮೀಣ ರಸ್ತೆಗಳ ಜಾಲವನ್ನು ಹೆಣೆಯುವಲ್ಲಿ ಮಹತ್ವದ ದಾಪುಗಾಲನ್ನಿರಿಸಲಾಗಿದೆ.

1 ಸಾರ್ವತ್ರಿಕವಾದ ರೈತರ ಕಣ



ಉತ್ಪನ್ನದ ನಂತರ ಅವುಗಳ ಒಕ್ಕಣೆ, ಬೆಳೆಯ ಆದಾಯದ ಒಂದು ಪ್ರಮುಖ ಅಂಶವಾಗಿದೆ. ಸಾರ್ವಜನಿಕ ರಸ್ತೆಗಳನ್ನು ಬಳಸಿ ತೆನೆಗಳಿಂದ ಕಾಳುಗಳನ್ನು ಬೇರ್ಪಡಿಸುವುದಕ್ಕೂ ನಿಗದಿತ ಒಕ್ಕಣೆ ಪ್ರದೇಶದಲ್ಲಿ ತೆನೆಗಳಿಂದ ಕಾಳುಗಳನ್ನು ಬೇರ್ಪಡಿಸುವುದಕ್ಕೂ ಬಹಳಷ್ಟು ವ್ಯತ್ಯಾಸಗಳಿವೆ. ನಿಗದಿತ ಒಕ್ಕಣೆ ಪ್ರದೇಶದಲ್ಲಿ ತೆನೆಗಳಿಂದ ಕಾಳುಗಳನ್ನು ಬೇರ್ಪಡಿಸುವುದರಿಂದ ಕಲ್ಮಶ ರಹಿತ ಉತ್ತಮ ಗುಣಮಟ್ಟದ ಧಾನ್ಯವನ್ನು ಪಡೆಯಬಹುದು ಹಾಗೂ ಸಾರ್ವಜನಿಕ ರಸ್ತೆಯಲ್ಲಿ ವಾಹನ ಸಂಚಾರ ಸುಗಮವಾಗುತ್ತದೆ. ಮಧ್ಯಮ ವರ್ಗದ ರೈತರು ಇದರ ಸದುಪಯೋಗ ಪಡಿಸಿಕೊಳ್ಳಬಹುದು. ರೈತರು ತಮ್ಮ ಹೊಲ/ಗದ್ದೆಯ ಸಮೀಪದಲ್ಲಿಯೇ ಇರುವ ಒಕ್ಕಣೆ ಕಣವನ್ನು ಉಪಯೋಗಿಸುವುದರಿಂದ ಒಂದೇ ಹಂತದಲ್ಲಿ ಧಾನ್ಯ ಮತ್ತು ಮೇವುಗಳ ಬೇರ್ಪಡೆ ಕಾರ್ಯ ಪೂರ್ಣಗೊಳಿಸುವ ಉದ್ದೇಶದಿಂದ ರೈತರ ಕಣ ನಿರ್ಮಾಣಕ್ಕೆ ಎರಡು ವರ್ಷದ ಹಿಂದೆಯೇ ಚಾಲನೆ ನೀಡಲಾಯಿತು.

2 ಆಟದ ಮೈದಾನ



ಹಳ್ಳಿಯ ಮಕ್ಕಳುಗಳಿಗೆ ಆಟವಾಡಲು ಆಟದ ಮೈದಾನವಿರಬೇಕು, ಪ್ರತಿ ಹಳ್ಳಿಯಲ್ಲಿಯೂ ನಿರ್ಮಾಣ ಮಾಡುವ ಆಟದ ಮೈದಾನವು ಗ್ರಾಮೀಣ ಯುವ ಜನರ ಆಟೋಟ ಚಟುವಟಿಕೆಗಳಿಗೆ ಉಪಯೋಗವಾಗುತ್ತದೆ. ಪ್ರತೀ ಗ್ರಾಮಕ್ಕೆ ಒಂದು ಆಟದ ಮೈದಾನವನ್ನು ನಿರ್ಮಿಸುವ ಮೂಲಕ ಗ್ರಾಮೀಣ ಯುವ ಜನತೆಯಲ್ಲಿ ಸ್ಫೂರ್ತಿ ತುಂಬಿ ಕ್ರೀಡೆಗಳಲ್ಲಿ ಭಾಗವಹಿಸುವಂತೆ ಮಾಡಲಾಗಿದೆ.

3 ಸ್ಮಶಾನ ಅಭಿವೃದ್ಧಿ



ಅಗಲಿದವರಿಗೆ, ಸಾಧನೆಗಳನ್ನು ಬಿಟ್ಟುಹೋದ ವ್ಯಕ್ತಿಗೆ ಗೌರವ ಸೂಚಿಸುವ ಹಾಗೂ ಅಂತ್ಯಕ್ರಿಯೆಗೆ ನೆರೆದವರೆಲ್ಲರ ಮನಸ್ಸುಗಳಿಗೆ ಸಮಾಧಾನ ನೀಡುವಂತಹ ತಾಣವಾಗಿ ಸ್ಮಶಾನ ಅಭಿವೃದ್ಧಿಗೊಳ್ಳಬೇಕೆಂಬ ಸದುದ್ದೇಶದಿಂದ ಸ್ಮಶಾನ ಅಭಿವೃದ್ಧಿ ಕಾರ್ಯಕ್ರಮವನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಕೈಗೆತ್ತಿಕೊಳ್ಳಲಾಯಿತು. ಈ ಕಾರ್ಯಕ್ರಮದಡಿಯಲ್ಲಿ ನಿರೀಕ್ಷೆಗೂ ಮೀರಿ ಪ್ರಗತಿ ಸಾಧಿಸಲಾಗಿದೆ. 2018ರ ವೇಳೆಗೆ ಪ್ರತಿಯೊಂದು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸೂಕ್ತವಾದ ಸ್ಮಶಾನದ ವ್ಯವಸ್ಥೆ ರೂಪುಗೊಳ್ಳಲಿವೆ.

4 ರೈತರ ಭೂ ಅಭಿವೃದ್ಧಿ



ತಲೆತಲಾಂತರದಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಸಣ್ಣ ಮತ್ತು ಅತೀಸಣ್ಣ ರೈತರು ಹಾಗೂ ಇತರೆ ಅರ್ಹ ವೈಯಕ್ತಿಕ ಫಲಾನುಭವಿ ಜನರು ಸಾಮಾಜಿಕವಾಗಿ ದುರ್ಬಲರಾಗಿ ಹಿಂದುಳಿದಿದ್ದಾರೆ. ಆರ್ಥಿಕವಾಗಿ ಅಶಕ್ತರೂ ಆಗಿದ್ದು, ದಿನನಿತ್ಯ ಜೀವನಕ್ಕಾಗಿ ಪರಾವಲಂಬಿತರಾಗಿರುತ್ತಾರೆ. ಸಂವಿಧಾನದಲ್ಲಿ ವಿಶೇಷ ಮೀಸಲಾತಿ ಸೌಲಭ್ಯ ಕಲ್ಪಿಸುವುದರ ಮೂಲಕ ಸರ್ಕಾರದ ವಿವಿಧ ಯೋಜನೆಯಡಿ ಇವರಿಗೆ ವಿಶೇಷ ಸೌಲಭ್ಯಗಳನ್ನು ಹಾಗೂ ಮೀಸಲಾತಿಗಳನ್ನು ಕಲ್ಪಿಸಲಾಗಿದೆ. ಸಮಾಜದ ಉನ್ನತೀಕರಣಕ್ಕಾಗಿ ಎಲ್ಲಾ ಜನಾಂಗದವರನ್ನು ಮೇಲಕ್ಕೆ ಎತ್ತುವುದು ಸರ್ಕಾರದ ಗುರಿಯಾಗಿರುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಸಾಮಾನ್ಯವಾಗಿ ಅತೀ ಚಿಕ್ಕ ಹಿಡುವಳಿದಾರರಾಗಿದ್ದು, ಅವರುಗಳ ಜಮೀನುಗಳು ಉಳುಮೆಗೆ ಯೋಗ್ಯವಾಗಿದೆ. ಸಮಾನ ಅಭಿವೃದ್ಧಿಗಾಗಿ ಈ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಯಿತು.

5 ನಮ್ಮ ಹಳ್ಳಿ ನಮ್ಮ ನೀರು




ಗ್ರಾಮೀಣ ಪ್ರದೇಶದಲ್ಲಿ ಹಾಗೂ ನಗರ ಪ್ರದೇಶಗಳಲ್ಲಿ ನೀರಿನ ಪೂರೈಕೆ ಮಾಡಲು ನೂರಾರು ಮೀಟರ್ ಆಳಕ್ಕೆ ಕೊಳವೆ ಬಾವಿ ಕೊರೆಯುವುದುಂಟು. ಪ್ರತಿ ಗ್ರಾಮಗಳಲ್ಲೂ ಅಂತರ್ಜಲ ಭಂಡಾರವನ್ನು ವೃದ್ಧಿಸುವ ಕೆಲಸ ಮಾಡಬೇಕಾಗಿದ್ದ ಹಿನ್ನೆಲೆಯಲ್ಲಿ ಆದ್ಯತೆಯ ಮೇರೆಗೆ 'ನಮ್ಮ ಹಳ್ಳಿ ನಮ್ಮ ನೀರು' ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು.

6 ಕುರಿ/ದನದ ದೊಡ್ಡಿ




ಸರ್ಕಾರವು ಗ್ರಾಮೀಣ ಜನರಿಗೆ ದನದ ಕೊಟ್ಟಿಗೆ, ಕುರಿ/ಮೇಕೆ ದೊಡ್ಡಿ ಹಾಗೂ ವೈಯಕ್ತಿಕ ಕೋಳಿ ಸಾಕಾಣಿಕೆ ಕೇಂದ್ರಗಳನ್ನು ನಿರ್ಮಿಸಲು ನೆರವು ನೀಡುವ ನಿಟ್ಟಿನಲ್ಲಿ ಚಿಂತನೆ ನಡೆಸಿ, ಇವುಗಳ ನಿರ್ಮಾಣ ಕಾಮಗಾರಿಗಳನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಕೈಗೊಳ್ಳಲು ಸರ್ಕಾರವು ತೀರ್ಮಾನಿಸಿತು. ಈ ತೀರ್ಮಾನದಂತೆ ಗ್ರಾಮೀಣ ಪ್ರದೇಶದ ರೈತರ/ಫಲಾನುಭವಿಗಳ ಜಮೀನುಗಳಲ್ಲಿ ಕೃಷಿಯೇತರ ಕೂಲಿ ಕಾರ್ಮಿಕರಿಗೆ ಅನುಕೂಲವಾಗುವಂತೆ, ಪಶುಸಂಗೋಪನಾ ಇಲಾಖೆಯ ಕಾಮಗಾರಿಗಳಾದ, ದನದ ಕೊಟ್ಟಿಗೆ, ಕೋಳಿ ಸಾಕಾಣಿಕೆ ಕೇಂದ್ರ ಮತ್ತು ಕುರಿ ದೊಡ್ಡಿ ಇವುಗಳನ್ನು ಆದ್ಯತಾ ಕಾಮಗಾರಿಗಳ 11ನೇ ಪ್ರವರ್ಗದಡಿ ಕಾಮಗಾರಿಗಳನ್ನು ಕೈಗೊಳ್ಳಲಾಯಿತು. ಇವುಗಳ ನಿರ್ಮಾಣದಿಂದ ರೈತರು ಪಶು/ಕುರಿ/ಕೋಳಿ ಸಾಕಾಣಿಕೆ ಮಾಡಲು ಸಹಕಾರಿಯಾಗಿದೆ.

7 ಸಮ್ಮೂರ ಕೆರೆ



ಹಳ್ಳಿಗಾಡಿನ ಬದುಕಿನಲ್ಲಿ ಹಿಂದಿನಿಂದ ಹಾಸುಹೊಕ್ಕಾಗಿ ಬಂದಂತಹ ಕೆರೆಗಳನ್ನು ಹಾಗೂ ಕಟ್ಟೆ, ಗೋಕಟ್ಟೆ, ಕಲ್ಯಾಣಿಗಳನ್ನು ಸಂರಕ್ಷಿಸುವ ಧ್ಯೇಯವನ್ನು ಈ ಕಾರ್ಯಕ್ರಮವು ಒಳಗೊಂಡಿರುತ್ತದೆ. ಇವುಗಳನ್ನು ಪುನಃಶ್ಚೇತನ ಗೊಳಿಸುವುದರಿಂದ ಪರಿಸರ ಸಂರಕ್ಷಣೆ, ಅಂತರ್ಜಲದ ವೃದ್ಧಿಯಾಗಿ ತೆರೆದ ಬಾವಿ ಹಾಗೂ ಕೊಳವೆ ಬಾವಿಗಳು ಮರುಪೂರಣವಾಗುತ್ತವೆ. ಇದರಿಂದ ಕುಡಿಯುವ ನೀರಿನ ಜಲಮೂಲಗಳು ವೃದ್ಧಿಯಾಗುತ್ತವೆ. ಪುನಃಶ್ಚೇತನಗೊಂಡ ಕೆರೆ, ಕಟ್ಟೆ, ಗೋಕಟ್ಟೆ ಕಲ್ಯಾಣಿಗಳೂ ಜನ-ಜಾನುವಾರು, ಪಕ್ಷಿ ಸಂಕುಲಗಳ ಸುಸ್ಥಿರ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವನ್ನು ವಹಿಸಿವೆ.


8 ನಮ್ಮ ಹೊಲ ನಮ್ಮ ದಾರಿ



ನಮ್ಮ ಹೊಲ–ನಮ್ಮ ದಾರಿ ಒಂದು ವಿಶಿಷ್ಟ ಯೋಜನೆ. ಇದು ಬದುಕಿನ ಹಾದಿಯಲ್ಲಿ ಹೊಲ–ಮನೆಗಳನ್ನು ಬೆಸೆಯುವ ಬಾಂಧವ್ಯದ ದಾರಿ. ಜನರಿಗೆ ರಸ್ತೆ ಒದಗಿಸುವ ಇಚ್ಛಾಶಕ್ತಿ ಸರ್ಕಾರಕ್ಕಿದ್ದು, ಇದುವರೆಗಿನ ಅಭಿವೃದ್ಧಿ ಕೆಲಸಗಳಲ್ಲಿ ಇದಕ್ಕೆ ವಿಶಿಷ್ಟ ಮಹತ್ವವಿದೆ.

ಇಂದು ಹೊಲಗಳಿಗೆ ಗೊಬ್ಬರ, ಬಿತ್ತನೆ ಬೀಜ, ಮತ್ತಿತರ ಕೃಷಿ ಉಪಕರಣಗಳನ್ನು ಕೊಂಡೊಯ್ಯುವುದು ದುಸ್ತರವಾಗಿದೆ. ಇದಕ್ಕೆ ಕಾರಣ ಹೊಲಗದ್ದೆಗಳಿಗೆ ಹೋಗಿಬರುವ ರಸ್ತೆ ಇರದಿರುವುದೇ ಮುಖ್ಯ ಕಾರಣ. ಇದನ್ನು ನಿವಾರಿಸುವ ನಿಟ್ಟಿನಲ್ಲಿ 'ನಮ್ಮ ಹೊಲ–ನಮ್ಮ ದಾರಿ' ಯೋಜನೆ ರೂಪ ತಾಳಿದೆ. ಈ ದಾರಿ ಕೇವಲ ಹೊಲಕ್ಕೆ ಮಾತ್ರ ದಾರಿಯಲ್ಲ. ಅದು ಅಭಿವೃದ್ಧಿಯ ಹಾದಿ. ಹೊಲದಿಂದ ಹೊಲಕ್ಕೆ, ಹೊಲದಿಂದ ಹಳ್ಳಿಗೆ ಸರಳವಾಗಿ ಸಾಗಲು 'ನಮ್ಮ ಹೊಲ ನಮ್ಮ ದಾರಿ' ಯೋಜನೆಯನ್ನು ವಿಸ್ತೃತವಾಗಿ ಕೈಗೆತ್ತಿಕೊಳ್ಳಲಾಗಿದೆ.

9 ರಾಜೀವ್ ಗಾಂಧಿ ಸೇವಾ ಕೇಂದ್ರ



ರಾಜೀವ್ ಗಾಂಧಿ ಸೇವಾ ಕೇಂದ್ರಗಳು ಜನತೆಯ ಸೇವಾ ಕೇಂದ್ರಗಳು. ರಾಷ್ಟ್ರದ ಹಾಗೂ ರಾಜ್ಯದ ಯೋಜನೆಗಳನ್ನು ಪರಸ್ಪರ ಪರಿಚಯಿಸುವ ಮಾಹಿತಿ ಕೇಂದ್ರ. ಸಾರ್ವಜನಿಕರ ಕನಸು ನನಸಾಗಿಸುವ ಹಲವು ಮಾಹಿತಿಗಳ ಕೋಶವನ್ನು ಒಳಗೊಂಡ ಸೇವಾ ಕೇಂದ್ರಗಳು. ಪಂಚಾಯತ್ ಮಟ್ಟದಲ್ಲಿ ಇಂಥ ಕೇಂದ್ರಗಳು ಸರ್ಕಾರದ ಅಭಿವೃದ್ಧಿ ಪರ ಚಟುವಟಿಕೆಗಳನ್ನು ಜನಸಾಮಾನ್ಯರಿಗೆ ಸೌಲಭ್ಯಗಳ ಕುರಿತಾಗಿ ತಿಳಿಸುವ ತಾಣವಾಗಿ ಕಾರ್ಯನಿರ್ವಹಿಸಬೇಕು. ಇಂತಹ ಕೇಂದ್ರಗಳ ಬಗ್ಗೆ ನಮ್ಮ ಹಳ್ಳಿಗಾಡಿನ ಜನತೆಗೆ ಹಲವು ನಿರೀಕ್ಷೆಗಳು ಇರುತ್ತವೆ. ಅವುಗಳನ್ನು ಸಾಕಾರಗೊಳಿಸುವ ಸಂಕಲ್ಪದಲ್ಲಿ ಸರ್ಕಾರವು ರಾಜೀವ್ ಗಾಂಧಿ ಸೇವಾ ಕೇಂದ್ರವನ್ನು ನಿರ್ಮಿಸುವ ಹೆಜ್ಜೆಯನ್ನಿಡಲಾಯಿತು.


(ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ 2013–14ನೇ ಸಾಲಿನಲ್ಲಿ ಒಂಬತ್ತು (9) ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲಾಗಿತ್ತು. ಈ ಕಾರ್ಯಕ್ರಮಕ್ಕೆ ಇನ್ನೂ ಆರು ಕಾರ್ಯಕ್ರಮಗಳನ್ನು 2014–15ರಿಂದ ಸೇರಿಸಲಾಯಿತು.)

10 ಬಯಲು ರಂಗಮಂದಿರ




ಒಂದು ಬಯಲು ರಂಗಮಂದಿರವಿರಬೇಕು, ಗ್ರಾಮೀಣ ಕರ್ನಾಟಕದ ಸಾಂಸ್ಕೃತಿಕ ಚಟುವಟಿಕೆಗಳನ್ನು ಉತ್ತೇಜಿಸಲು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಪ್ರತೀ ಗ್ರಾಮವು ಒಂದು ಬಯಲು ರಂಗ ಮಂದಿರವನ್ನು ಹೊಂದಿರಬೇಕೆಂಬ ಕಲ್ಪನೆಗೆ ಇಂಬು ಕೊಟ್ಟು ಈ ಕಾರ್ಯಕ್ರಮ ಪ್ರಾರಂಭಿಸಲಾಯಿತು. ಗ್ರಾಮೀಣ ಕಲೆಗಳನ್ನು ಪ್ರೋತ್ಸಾಹಿಸುವ ಉದ್ದೇಶವನ್ನೂ ಹೊಂದಿರುವ ಈ ರಂಗಮಂದಿರಗಳು 2014-15ನೇ ಸಾಲಿನಲ್ಲಿ ಪ್ರಾರಂಭಗೊಂಡವು.

11 ಕೊಳವೆ ಬಾವಿ ಮರುಪೂರಣ



ಸಾವಿರ ಅಡಿಗಳಷ್ಟು ಆಳಕ್ಕೆ ಹೋಗಿ ಪ್ರಯತ್ನ ಮಾಡಿದರೂ ಸೂಕ್ತವಾದ ಕುಡಿಯುವ ನೀರು ಲಭ್ಯ ಇಲ್ಲದೇ ಇರುವ ಪರಿಸ್ಥಿತಿ ಇಂದು ರಾಜ್ಯದಲ್ಲಿದೆ. ಈಗಿರುವ ಕೊಳವೆ ಬಾವಿಗಳನ್ನು ಮರು ಪೂರಣ ಮಾಡುವ ವಿನೂತನ ಕಾರ್ಯಕ್ರಮವನ್ನು ಜಾರಿಗೆ ತರಲಾಗಿದೆ. ತನ್ಮೂಲಕ ಅಂತರ ಜಲದ ಕೋಷ್ಟಕವನ್ನು ವೃದ್ದಿಸಲು ಸೂಕ್ತ ಕ್ರಮ ಕೈಗೊಳ್ಳಲಾಗಿದೆ. ರಾಜ್ಯಾದ್ಯಂತ 2014–15ನೇ ಸಾಲಿನಲ್ಲಿ 3579 ಕಾಮಗಾರಿಗಳನ್ನು ಹತ್ತು ಜಿಲ್ಲೆಗಳ ವ್ಯಾಪ್ತಿಯಲ್ಲಿ ಕೈಗೆತ್ತಿಕೊಳ್ಳಲಾಗಿದೆ.

12 ಗ್ರಾಮೀಣ ಗೋದಾಮುಗಳು




ಗ್ರಾಮೀಣ ಗೋದಾಮುಗಳನ್ನು ಗ್ರಾಮದ ಲಕ್ಷ್ಮೀ ಮಂದಿರಗಳೆಂದು ಕರೆಯಲಾಗುತ್ತದೆ. ರೈತ ಬೆಳೆಯುವ ಕಾಳನ್ನು ಸಂಗ್ರಹಿಸಿಟ್ಟುಕೊಂಡು ಮಾರುಕಟ್ಟೆಯಲ್ಲಿ ಸೂಕ್ತ ವಾತಾವರಣವಿರುವಾಗ ಗೋದಾಮುಗಳಿಂದ ಮಾರುಕಟ್ಟೆಗೆ ರೈತ ಬೆಳೆದ ಬೆಳೆಯನ್ನು ಸಾಗಿಸುವ ಮೂಲಕ ರೈತನ ಬೆಳೆಗೆ ಲಾಭದಾಯಕ ಬೆಲೆ ದೊರಕಿಸಿಕೊಡುವ ನಿಟ್ಟಿನಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮ ಗ್ರಾಮೀಣ ಮಾರುಕಟ್ಟೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಬಹು ದೊಡ್ಡ ಹೆಜ್ಜೆಯಾಗಿದೆ.

13 ಗ್ರಾಮೀಣ ಉದ್ಯಾನವನಗಳು



ಊರಿಗೊಂದು ವನ, ಮನೆಗೊಂದು ಮರ ಎಂಬ ಕಲ್ಪನೆಯ ಹಿನ್ನೆಲೆಯಲ್ಲಿ ಪ್ರತಿಯೊಂದು ಹಳ್ಳಿಯೂ ಸುಂದರವಾಗಿ ಕಂಗೊಳಿಸಬೇಕೆಂಬ ಸದುದ್ದೇಶದಿಂದ ಗ್ರಾಮೀಣ ಉದ್ಯಾನ ವನಗಳ ಕಲ್ಪನೆಯನ್ನು ಅನುಷ್ಠಾನಗೊಳಿಸಲು 2014–15ರಲ್ಲಿ ನಿರ್ಣಯಿಸಲಾಯಿತು. ಗ್ರಾಮೀಣ ಉದ್ಯಾನವನಗಳನ್ನು ಸ್ಥಾಪನೆ ಮಾಡುವ ಉದ್ದೇಶದಿಂದ ಕಾಮಗಾರಿಗಳನ್ನು ಪ್ರಾರಂಭಿಸಲಾಯಿತು.

14 ಬಹು ಕಮಾನು ಚೆಕ್ ಡ್ಯಾಮ್



ರಭಸವಾಗಿ ಹರಿದು ಹೋಗುವ ಮಳೆ ನೀರನ್ನು ನಿಲ್ಲಿಸಿ ಅಂತರ್‌ಜಲವನ್ನು ವೃದ್ಧಿಸುವುದು ಚೆಕ್‌ಡ್ಯಾಮ್‌ಗಳ ನಿರ್ಮಾಣದ ಮೂಲ ಆಶಯವಾಗಿದೆ. ಈ ಕಾಮಗಾರಿಗಳನ್ನು ಆದ್ಯತೆ ಮೇಲೆ ಕೈಗೆತ್ತಿಕೊಂಡು ಗ್ರಾಮೀಣ ಪ್ರದೇಶದಲ್ಲಿ ಕುಸಿಯುತ್ತಿರುವ ಅಂತರಜಲದ ಮಟ್ಟವನ್ನು ಇದರಿಂದ ಹೆಚ್ಚಿಸಬಹುದಾಗಿದೆ.

15 ತಿಪ್ಪೆಗಳ ಸಂರಕ್ಷಣೆ



ತಿಪ್ಪೆಗಳು ಗ್ರಾಮೀಣ ಬದುಕಿನ ಅವಿಭಾಜ್ಯ ಅಂಗಗಳು. ರೈತರ ಜಮೀನುಗಳಿಗೆ ಉತ್ತಮ ಪೋಷಕಾಂಶ ಒದಗಿಸುವ ಗೊಬ್ಬರದ ಗುಂಡಿಗಳು ಗ್ರಾಮೀಣರ ಪಾಲಿಗೆ ಕಾಮದೇನುಗಳಾಗಿವೆ. ಅವೈಜ್ಞಾನಿಕ ನಿರ್ವಹಣೆಯಿಂದ ಈಗ ಅಸಹ್ಯ ಸ್ಥಳವಾಗಿರುವ ಇವುಗಳನ್ನು ವೈಜ್ಞಾನಿಕವಾಗಿ ಸಂಸ್ಕರಿಸಿ ಉತ್ತಮ ಗೊಬ್ಬರ ಪಡೆಯುವಂತೆ ಮಾಡುವುದು ಈ ಯೋಜನೆಯ ಉದ್ದೇಶ.

16 ಕೌಶಲ್ಯಾಭಿವೃದ್ಧಿ



ಗ್ರಾಮೀಣ ಪ್ರದೇಶದ ಕುಟುಂಬಗಳ ಅರ್ಹ ಸದಸ್ಯರುಗಳನ್ನು ಗುರುತಿಸಿ ಅವರನ್ನು ಸ್ವಸಹಾಯ ಗುಂಪುಗಳನ್ನಾಗಿ ಸಂಘಟಿಸಲು ಆದ್ಯತೆ ನೀಡಲಾಗುತ್ತಿದೆ. ನಂತರ ಈ ಸ್ವಸಹಾಯ ಗುಂಪುಗಳ ಒಕ್ಕೂಟಗಳನ್ನು ರಚಿಸಿ ಅವುಗಳ ಮೂಲಕ ಉತ್ಪಾದನಾ ಚಟುವಟಿಕೆಗಳನ್ನು ಕೈಗೊಳ್ಳಲು ಸಜ್ಜುಗೊಳಿಸಲಾಗುತ್ತದೆ. ಜೀವನೋಪಾಯಕ್ಕಾಗಿ ವಿವಿಧ ವೃತ್ತಿ ಆಧಾರಿತ ಕೌಶಲ್ಯಗಳನ್ನು ವೃದ್ಧಿಸಿ ಉದ್ಯೋಗವಕಾಶಗಳನ್ನು ಸೃಷ್ಟಿಸುವ ಗುರಿಯನ್ನು ಈ ಯೋಜನೆಯು ಹೊಂದಿದ್ದು, ಯೋಜನೆಯು ರಾಜಾದ್ಯಂತ ಜಾರಿಯಲ್ಲಿದೆ.

17 ಶುದ್ಧ ಕುಡಿಯುವ ನೀರಿನ ಘಟಕಗಳು



ಶುದ್ಧನೀರಿನ ಘಟಕಗಳನ್ನು ಸ್ಥಾಪಿಸಿ, ಶುದ್ಧ ನೀರು ಪೂರೈಸುವುದರಿಂದ ಅಶುದ್ಧ ನೀರಿನಿಂದಾಗಿ ಬರುವ ರೋಗಗಳನ್ನು ತಡೆಗಟ್ಟಿ ಜನರನ್ನು ಆರೋಗ್ಯವಂತರನ್ನಾಗಿ ಮಾಡಬಹುದಾಗಿದೆ. ಜನರಿಗೆ ಅವಶ್ಯಕವಾದ ಕುಡಿಯುವ ನೀರಿನ ಮೂಲಭೂತ ಬೇಡಿಕೆಯನ್ನು ಸರ್ಕಾರವು ಪೂರೈಸಲು ಆಸಕ್ತ ಸಂಘ, ಸಂಸ್ಥೆಗಳು ಮತ್ತು ಖಾಸಗಿಯವರ ಸಹಕಾರವನ್ನು ಪಡೆದು ಶುದ್ಧ ನೀರಿನ ಘಟಕಗಳನ್ನು ಸ್ಥಾಪಿಸುತ್ತಿದೆ. ಅತ್ಯಲ್ಪ ದರದಲ್ಲಿ ಅತ್ಯುತ್ತಮ ಗುಣಮಟ್ಟದ ಕುಡಿಯುವ ನೀರನ್ನು ಪೂರೈಸುವುದು ಈ ಯೋಜನೆಯ ಸದಾಶಯವಾಗಿದೆ.

18 ಮನೆಗೊಂದು ಶೌಚಾಲಯ



- ವೈಯಕ್ತಿಕ ನೈರ್ಮಲ್ಯ/ ಶುಚಿತ್ವ ಕಾಪಾಡುವುದು.
- ಗ್ರಾಮೀಣ ಸಮುದಾಯಕ್ಕೆ ನೈರ್ಮಲ್ಯದ ಮಹತ್ವ ಕುರಿತು ಜಾಗೃತಿ ಮೂಡಿಸುವುದು.
- ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳನ್ನು ನಿಯಂತ್ರಣಗೊಳಿಸುವುದು.
- ಎಲ್ಲಾ ಕುಟುಂಬಗಳು ಶೌಚಾಲಯ ನಿರ್ಮಿಸಿಕೊಂಡು ಬಳಸುವಂತೆ ಪ್ರೇರೇಪಿಸುವುದು ಹಾಗೂ ಬಯಲು ಮಲ ವಿಸರ್ಜನೆ ಮುಕ್ತ ಮಾಡುವುದು.
- ಅಂಗನವಾಡಿ ಶೌಚಾಲಯ ನಿರ್ಮಾಣದ ಮುಖಾಂತರ ಮಗುವಿನ ಮನಸ್ಸಿನಲ್ಲಿ ನೈರ್ಮಲ್ಯದ ಅಭ್ಯಾಸಗಳನ್ನು ರೂಡಿಸುವುದು.
- ಶಾಲಾ ಶೌಚಾಲಯ ನಿರ್ಮಾಣ ಮುಖಾಂತರ ಮಕ್ಕಳ ವೈಯಕ್ತಿಕ ನೈರ್ಮಲ್ಯದ ಕಡೆ ಗಮನ ಹರಿಸುವುದು ಮತ್ತು ಹೆಣ್ಣು ಮಕ್ಕಳಿಗೆ ಪೂರಕ ನೈರ್ಮಲ್ಯದ ವ್ಯವಸ್ಥೆ ಕಲ್ಪಿಸುವುದು.
- ಅಂಗವಿಕಲ, ಹಿರಿಯ ನಾಗರೀಕರ ಅನುಕೂಲಕ್ಕಾಗಿ ಅವರಿಗನುಗುಣವಾಗಿ ಶೌಚಾಲಯ ನಿರ್ಮಿಸುವುದು.

19 ರಾಜೀವ್ ಗಾಂಧಿ ಯುವ ಚೈತನ್ಯ ಯೋಜನೆ




- ಮೊದಲನೆಯದಾಗಿ ಪಂಚಾಯತ್ ರಾಜ್ ವ್ಯವಸ್ಥೆಯ ಸಹಯೋಗದೊಂದಿಗೆ ಯಾವುದೇ ಸರ್ಕಾರಿ ಯೋಜನೆಗಳ ಪ್ರತಿಫಲ ಪಡೆಯದ ಗ್ರಾಮೀಣ ಯುವಜನರಿಗೆ ಲಾಭದಾಯಕ ಸ್ವ ಉದ್ಯೋಗದ ಅವಕಾಶ ಕಲ್ಪಿಸುವುದರ ಮುಖಾಂತರ ಗ್ರಾಮೀಣ ಪ್ರದೇಶದ ಸಾಹಸದ ಬದುಕು ಗ್ರಾಮದ ಇತರರಿಗೆ ಸ್ವ-ಉದ್ಯೋಗಿಗಲಾಗುವಂತೆ ಪ್ರೇರಣೆ ನೀಡುವುದು.
- ಎರಡನೆಯದಾಗಿ ನಿರುದ್ಯೋಗಿ ಯುವಕ-ಯುವತಿಯರಿಗೆ ವೃತ್ತಿ ಕೌಶಲ್ಯ ತರಬೇತಿಗಳನ್ನು ನೀಡಿ ವಿವಿಧ ಸಂಘ-ಸಂಸ್ಥೆಗಳಲ್ಲಿ, ಸರ್ಕಾರದ ಹಾಗೂ ಖಾಸಗಿ ಕಂಪನಿಗಳಲ್ಲಿ ಇವರು ಉದ್ಯೋಗ/ನೌಕರಿ/ಕೆಲಸ ಪಡೆಯುವಲ್ಲಿ ಸಹಾಯ ಮಾಡುವುದು. ಪೋಲೀಸ್ ತರಬೇತಿ ಸಂಸ್ಥೆಗಳ ಜೊತೆ ತೊಡಗಿಸಿ ಕೈಗಾರಿಕಾ ವಲಯಗಳಲ್ಲಿನ ರಕ್ಷಣಾ ಕಾರ್ಯಗಳ ಉದ್ಯೋಗ ಪಡೆಯುವಂತೆ ಮಾಡುವುದು.
- ಬೇರೆ-ಬೇರೆ ಕೈಗಾರಿಕೆ/ಸೇವಾ ಸಂಸ್ಥೆಗಳಿಗೆ ಉದ್ಯೋಗಾಸಕ್ತರನ್ನು ದೊರಕಿಸಲು ಸಮರ್ಥವಿರುವ ಸೇವಾ ಸಂಸ್ಥೆಗಳನ್ನು ಗುರುತಿಸಿ ಅವುಗಳ ಸೇವೆ ಪಡೆಯುವುದು.
- ಗ್ರಾಮೀಣ ಯುವಜನರು ನಗರ ಪ್ರದೇಶಗಳಿಗೆ ವಲಸೆ ಹೋಗುವುದನ್ನು ತಪ್ಪಿಸುವುದು. ನಿರುದ್ಯೋಗಿ ಯುವಜನರನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಕಾರ್ಯಕ್ರಮಗಳೊಂದಿಗೆ ಜೋಡಿಸುವುದು.
- ರಾಜೀವ ಗಾಂಧಿ ಯುವ ಚೈತನ್ಯ ಯೋಜನೆ ಇದೇ ಮೊದಲ ಬಾರಿಗೆ ಗ್ರಾಮೀಣ ಪ್ರದೇಶದ ನಿರುದ್ಯೋಗಿ ಯುವಜನರಿಗಾಗಿ ಸ್ವ-ಉದ್ಯೋಗ ಹಾಗೂ ಕೌಶಲ್ಯ ತರಬೇತಿಗಳನ್ನು ನೀಡುವ ಮುಖಾಂತರ ಉದ್ಯೋಗ ಕಲ್ಪಿಸುವ ವಿಶೇಷ ಯೋಜನೆಯಾಗಿದೆ.

20 ಕೃಷಿಕ ಮಹಿಳಾ ಸಶಕ್ತೀಕರಣ



ಕೃಷಿ ಚಟುವಟಿಕೆಗಳಲ್ಲಿ ಮಹಿಳೆಯರ ಸಬಲೀಕರಣ ಮಾಡುವುದೇ ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಈ ಯೋಜನೆಯು ವಿಶೇಷವಾಗಿ ಗ್ರಾಮೀಣ ಭಾಗದ ರೈತ ಮಹಿಳೆಯರ ಸ್ವಸಹಾಯ ಗುಂಪುಗಳನ್ನು ರಚಿಸುವಲ್ಲಿ ಹಾಗೂ ಕೃಷಿ ಮತ್ತು ಕೃಷಿಯಾಧಾರಿತ ಚಟುವಟಿಕೆಗಳಲ್ಲಿ ಕೌಶಲ್ಯ ತರಬೇತಿ ನೀಡಿ ಅಭಿವೃದ್ಧಿಪಡಿಸಲು ಸಹಕಾರಿಯಾಗಿದೆ.

21 ಕುಡಿಯುವ ನೀರು ಮತ್ತು ನೈರ್ಮಲ್ಯ



ಕರ್ನಾಟಕದ ಪ್ರತಿಯೊಂದು ಗ್ರಾಮದ ಪ್ರತಿಯೊಂದು ಕುಟುಂಬವು ಸುರಕ್ಷಿತ ಹಾಗೂ ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆಗೆ ಸಂಪರ್ಕ ಹೊಂದಿರಬೇಕು, ಶೌಚಾಲಯ ಹೊಂದಿರಬೇಕು ಹಾಗೂ ಆ ಶೌಚಾಲಯವು ಉಪಯೋಗಿಸಲ್ಪಡುತ್ತಿರಬೇಕು ಎಂಬ ಮೂಲಭೂತ ತಳಹದಿಯ ಆಧಾರದ ಮೇಲೆ ಈ ಸರ್ಕಾರ ಒಂದಾದಮೇಲೊಂದರಂತೆ ಜನಪರ ಪರಿಣಾಮಕಾರಿಯಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಸಾಧನೆಯ ಹಾದಿಯಲ್ಲಿ ಕೈಗೊಳ್ಳಲಾದ ಕಾರ್ಯಕ್ರಮಗಳ ಮೂಲಕ ಸಾಧಿಸಲಾದ ಪ್ರಗತಿಯನ್ನು ಈ ಕೆಳಕಂಡಂತೆ ದಾಖಲಿಸಲಾಗಿದೆ.

ಅಧ್ಯಾಯ – 2

ಪುನರ್ ವ್ಯಾಖ್ಯಾನದ ಹಾದಿಯಲ್ಲಿ

- ಕುಡಿಯುವ ನೀರಿನ ಸಮಸ್ಯೆಗೆ ಸ್ಪಂದಿಸುವ ಸರ್ಕಾರದ ಪ್ರವೃತ್ತಿಯಲ್ಲಿ ಬದಲಾವಣೆ.
- ಎಲ್ಲರಿಗೂ ಶುದ್ಧ ಕುಡಿಯುವ ನೀರು ಒದಗಿಸಬೇಕೆಂಬ ಸಂಕಲ್ಪ.
- ಪ್ರಧಾನ ಮಂತ್ರಿ ಕುಡಿಯುವ ನೀರಿನ ಸಮಾನ ಗುಣಮಟ್ಟದ ನೀರನ್ನು ಶ್ರೀಸಾಮಾನ್ಯರು ಕುಡಿಯಬೇಕೆಂಬ ಮಹತ್ವಾಕಾಂಕ್ಷಿ ಪ್ರಯತ್ನಗಳ ಆರಂಭ.

ಮೇಲ್ಮೈ ಕುಡಿಯುವ ನೀರಿನ ಪೂರೈಕೆಯಲ್ಲಿ ಮಹತ್ವದ ಹೆಜ್ಜೆಗಳು:

- ಕರ್ನಾಟಕ ರಾಜ್ಯದ ಗ್ರಾಮೀಣ ಭಾಗಕ್ಕೆ ಕುಡಿಯುವ ನೀರಿನ ಅವಶ್ಯಕತೆಗಳ ಸಮಗ್ರ ಸಮೀಕ್ಷೆ.
  - 62 ಟಿ.ಎಂ.ಸಿ ನೀರಿನ ಅವಶ್ಯಕತೆ.
  - 45,000 ಕೋಟಿ ರೂಗಳ ಅಗತ್ಯದ ಲೆಕ್ಕಾಚಾರದ ಅಂದಾಜು.

ಬೇಸಿಗೆಯ ಬವಣೆ ನೀಗಿಸಲು ಹಲವಾರು ಕಾರ್ಯಕ್ರಮಗಳು:

- ಕುಡಿಯುವ ನೀರಿನ ಪೂರೈಕೆಯ ಸಮಸ್ಯೆಗಳ ಬಗ್ಗೆ ದೂರು ಮತ್ತು ಅಹವಾಲುಗಳನ್ನು ಸ್ವೀಕರಿಸಲು ಕಾಲ್‌ಸೆಂಟರ್ ವ್ಯವಸ್ಥೆಗೆ ಚಾಲನೆ.
- ಶಾಸಕರ ನೇತೃತ್ವದಲ್ಲಿಯ ಟಾಸ್ಕ್‌ಫೋರ್ಸ್‌ಗಳಿಗೆ ಅಗತ್ಯದ ಹಣ.
- ಅಧಿಕಾರಿಗಳೇ ಶಾಸಕರ ಬಳಿಗೆ ತೆರಳಿ ಕುಡಿಯುವ ನೀರಿಗಾಗಿ ಲಭ್ಯವಿರುವ ಹಣದ ಬಗ್ಗೆ ಮಾಹಿತಿ ನೀಡುವ ಕ್ರಮ.

- ನೈರ್ಮಲ್ಯ:
  - ಕರ್ನಾಟಕದ ನಡಿಗೆ ನೈರ್ಮಲ್ಯದ ಕಡೆಗೆ
  - ಶೌಚಾಲಯ ನಿರ್ಮಾಣದಲ್ಲಿ ರಾಷ್ಟ್ರದಲ್ಲಿಯೇ ಪ್ರಥಮ ಸ್ಥಾನ
  - ಗ್ರಾಮೀಣ ಭಾಗದ ನೈರ್ಮಲ್ಯದ ನೈಜ ಅವಶ್ಯಕತೆಗಳತ್ತ ಚಿತ್ತ.
  - ಮಹಾತ್ಮಾಗಾಂಧೀಜಿಯವರ 150ನೇ ಜನ್ಮ ವಾರ್ಷಿಕೋತ್ಸವದ ಮುನ್ನಾ ವರ್ಷವಾದ 2018ಕ್ಕೆ ರಾಜ್ಯವನ್ನು ಬಯಲು ಬಹಿರ್ದೆಸೆ ಮುಕ್ತವನ್ನಾಗಿಸುವ ದಿಸೆಯಲ್ಲಿ ಕಾರ್ಯಕ್ರಮ. 2013–14ನೇ ಸಾಲಿನಲ್ಲಿ 6 ಲಕ್ಷ ಶೌಚಾಲಯಗಳ ನಿರ್ಮಾಣದ ಗುರಿಯಲ್ಲಿ 5.05 ಲಕ್ಷ ಶೌಚಾಲಯಗಳ ನಿರ್ಮಾಣ.
  - ಬಯಲು ಬಹಿರ್ದೆಸೆ ನಿವಾರಣೆಯನ್ನು ಆದ್ಯತೆಯ ಕಾರ್ಯಕ್ರಮವನ್ನಾಗಿ ಪರಿಗಣಿಸಿ 2014ರ ಸೆಪ್ಟೆಂಬರ್ ತಿಂಗಳಿನಲ್ಲಿ ವಿಶೇಷ ಅಭಿಯಾನದ ಮೂಲಕ ಸೆಪ್ಟೆಂಬರ್– 2015ರೊಳಗೆ 7.60 ಲಕ್ಷ ಶೌಚಾಲಯಗಳ ನಿರ್ಮಾಣಕ್ಕೆ ಕಾರ್ಯಾದೇಶ.
  - 2014–15ನೇ ಸಾಲಿನಲ್ಲಿ ಒಟ್ಟು 8.93 ಲಕ್ಷ ಶೌಚಾಲಯಗಳ ನಿರ್ಮಾಣ. ಒಟ್ಟು 13.86 ಲಕ್ಷ ಶೌಚಾಲಯಗಳ ನಿರ್ಮಾಣ.
  - ಬಚ್ಚಲು ಮನೆ ಸಹಿತ ಶೌಚಾಲಯಗಳ ನಿರ್ಮಾಣ ಮಾಡುವ ಗ್ರಾಮೀಣ ಗೌರವ ಯೋಜನೆ ಜಾರಿ.
  - ಶೌಚಾಲಯ, ಸ್ನಾನ ಗೃಹ, ಬಟ್ಟೆ ತೊಳೆಯಲು ಜಾಗ, ಡ್ರೆಸ್ಸಿಂಗ್ ರೂಂ, ಹೇರ್ ಡ್ರೈಯರ್ ಹಾಗೂ ಮಕ್ಕಳ ಆಟಕ್ಕೂ ಅನುಕೂಲವಿರುವ ಉದ್ಯಾನವನವನ್ನು ಹೊಂದಿರುವ ಸ್ವತಂತ್ರ ಕೊಳವೆಬಾವಿ ವ್ಯವಸ್ಥೆ ಸೌಲಭ್ಯವುಳ್ಳ ಸಾರ್ವಜನಿಕ ಶೌಚಾಲಯ ಸಂಕೀರ್ಣ ನಿರ್ಮಾಣದ ಕಲ್ಪನೆಗೆ ಇಂಬು. ಇಂತಹ 1000 ಶೌಚಾಲಯ ಸಂಕೀರ್ಣಗಳ ನಿರ್ಮಾಣಕ್ಕೆ ಚಾಲನೆ.
  - ವಯೋವೃದ್ಧರು, ಅಂಗವಿಕಲರ ಮತ್ತು ಅಸಹಾಯಕರ ನೆರವಿಗಾಗಿ ಹಳ್ಳಿಗಳಲ್ಲಿ ಕಮೋಡ್ ವ್ಯವಸ್ಥೆ.



- ಜನಜಾಗೃತಿಗಾಗಿ ವಿಶೇಷ ವ್ಯವಸ್ಥೆ. ಬಯಲು ಬಹಿರ್ದೆಸೆಯಿಂದ ಆರೋಗ್ಯದ ಮೇಲೆ ಆಗುತ್ತಿರುವ ಅನೇಕ ದುಷ್ಪರಿಣಾಮಗಳ ಬಗ್ಗೆ ತಿಳುವಳಿಕೆ. ಹೆಣ್ಣುಮಕ್ಕಳ ಗೌರವ, ಘನತೆ ಸುರಕ್ಷತೆ ದೃಷ್ಟಿಯಿಂದ ಸಮರೋಪಾದಿಯಲ್ಲಿ ಶೌಚಾಲಯ ಹಾಗೂ ಸ್ನಾನದ ಮನೆಸಹಿತ ಶೌಚಾಲಯಗಳ ನಿರ್ಮಾಣದ ಕಾಮಗಾರಿಗೆ ಚಾಲನೆ ನೀಡಿ ಆರೋಗ್ಯವಂತ ಸಮುದಾಯದ ಜನಜೀವನ ನಿರ್ಮಾಣ ಮಾಡುವಲ್ಲಿ ಆಂದೋಲನಕಾರಿ ಕಾರ್ಯಕ್ರಮ ವೈಯಕ್ತಿಕ ಶೌಚಾಲಯ, ಶಾಲಾ ಶೌಚಾಲಯ, ಸಾಮೂಹಿಕ ಶೌಚಾಲಯ ನಿರ್ಮಾಣದಂತಹ ಮೂರು ನೈರ್ಮಲ್ಯದ ವಲಯಗಳಿಗೆ ಆದ್ಯತೆ.
- ಕೊಪ್ಪಳ, ಬೆಳಗಾವಿ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಅಲ್ಲಿಯ ಜಿಲ್ಲಾ ಪಂಚಾಯತಿಯ ಅಧ್ಯಕ್ಷರು ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳ ವಿಶೇಷ ಮುತುವರ್ಜಿಯಿಂದ ಗುರಿಯಲ್ಲಿ ಶೇ.150ಕ್ಕೂ ಹೆಚ್ಚರಷ್ಟು ಸಾಧನೆಯಾಗಿದ್ದು ಶೌಚಾಲಯ ನಿರ್ಮಾಣದಲ್ಲಿ ಇದೊಂದು ದಾಖಲೆಯಾಗಿದೆ.

ಅಧ್ಯಾಯ – 3

ಕರ್ನಾಟಕ ಗ್ರಾಮೀಣ ಜೀವನೋಪಾಯ ಮಿಷನ್

ಉದ್ಯೋಗ ಸೃಷ್ಟಿ:

ಬಡತನ ನಿರ್ಮೂಲನೆ, ಉದ್ಯೋಗ ಅರಸಿ ಗುಳೇ(ವಲಸೆ) ಹೋಗುವಿಕೆಯ ನಿರ್ನಾಮ ಮತ್ತು ಅರೆಕುಶಲ ಕಾರ್ಮಿಕರಿಗೆ ಉದ್ಯೋಗ ಒದಗಿಸಲು ಸಾಮಾಜಿಕ ಸುರಕ್ಷತೆಯ ಜಾಲ ರೂಪಿಸಬೇಕೆಂಬ ಉದ್ದೇಶದಿಂದ ಅಕುಶಲ ಮಾನವ ಸಂಪನ್ಮೂಲವನ್ನು ಕೌಶಲ್ಯಯುತ ಮಾನವ ಸಂಪನ್ಮೂಲವನ್ನಾಗಿ ಪರಿವರ್ತಿಸಲು ಅಗತ್ಯದ ಮಾರ್ಗೋಪಾಯಗಳುಳ್ಳ ಸಾಂಸ್ಥಿಕ ವ್ಯವಸ್ಥೆ ಕಲ್ಪಿಸುವ ಮೂಲಕ ಜನ ಜೀವನದ ಅವಕಾಶಗಳನ್ನು ಹೆಚ್ಚಿಸಲಾಗುತ್ತಿದೆ. ಗ್ರಾಮೀಣ ಆರ್ಥಿಕ ವ್ಯವಸ್ಥೆಯನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯಬೇಕೆಂಬ ಸದುದ್ದೇಶದಿಂದ ಗ್ರಾಮೀಣ ಕರ್ನಾಟಕದಲ್ಲಿ ಸಂಪತ್ತನ್ನು ಹೆಚ್ಚಿಸಲು ಉದ್ಯಮದಾರಿಕೆ ಕೌಶಲ್ಯಗಳನ್ನು ಉತ್ತೇಜಿಸುವ ಮೂಲಕ ಸ್ವಯಂ ಉದ್ಯೋಗ ಮಾರ್ಗೋಪಾಯಗಳಿಗೆ ಚಾಲನೆ ನೀಡಲಾಗಿದೆ.

- ರಾಜೀವ್ ಗಾಂಧೀ ಯುವ ಚೈತನ್ಯ ಯೋಜನೆ ಮೂಲಕ ಗ್ರಾಮ ಸಭೆಗಳಲ್ಲಿ 1,62 ಲಕ್ಷ ಗ್ರಾಮೀಣ ನಿರುದ್ಯೋಗಿ ಯುವಕರ ಆಯ್ಕೆ
- ತರಬೇತಿ ಸ್ವ ಉದ್ಯೋಗಕ್ಕೆ ಸಹಾಯ 10 ಕೋಟಿ ರೂಪಾಯಿ ಬಡ್ಡಿ ಸಹಾಯ ಧನ.
- ವೇತನ ಉದ್ಯೋಗಕ್ಕೆ ಉದ್ಯೋಗ ಮೇಳಗಳ ಆಯೋಜನೆ.

ಸಂಜೀವಿನಿ ಜೀವನೋಪಾಯ ಅಭಿಯಾನ:

- ಯೋಜನೆ/ಕಾರ್ಯಕ್ರಮದ ಫಲಾನುಭವಿಗಳು: ಬಡತನ ರೇಖೆಗಿಂತ ಕೆಳಗಿರುವ ಗ್ರಾಮೀಣ ಪ್ರದೇಶದ ಮಹಿಳಾ ಸ್ವಸಹಾಯ ಗುಂಪಿನ ಸದಸ್ಯೆಯರು, ಪ.ಜಾತಿ, ಪಂ.ಪಂಗಡ, ವಿಕಲಚೇತನರು, ಭೂರಹಿತರು, ಮಹಿಳಾ ಲೈಂಗಿಕ ವೃತ್ತಿ ತ್ಯಜಿಸಿದವರು, ವಲಸೆ ನಿರತ ಕೂಲಿ ಕಾರ್ಮಿಕರು ಹಾಗೂ ಇತರರು.
- ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ ಅಡಿಯಲ್ಲಿ ಗ್ರಾಮೀಣ ಪ್ರದೇಶದ ಮಹಿಳೆಯರನ್ನು ಸ್ವಸಹಾಯ ಗುಂಪುಗಳ ಮೂಲಕ ಸಂಘಟಿಸಿ, ಅವರಿಗೆ ಪಂಚ ಸೂತ್ರಗಳ (ನಿರಂತರ ಸಭೆ, ನಿರಂತರ ಉಳಿತಾಯ, ನಿರಂತರ ಆಂತರಿಕ ಸಾಲ, ನಿರಂತರ ಮರುಪಾವತಿ, ಲೆಕ್ಕಪತ್ರ ನಿರ್ವಹಣೆ) ಬಗ್ಗೆ ತರಬೇತಿ ಮೂಲಕ ಅನುಸರಿಸುವಂತೆ ಮಾಡುವುದು.
- ಇದುವರೆಗೂ ಸ್ವಸಹಾಯ ಗುಂಪಿನಲ್ಲಿ ಸೇರ್ಪಡೆಯಾಗದೇ ಇರುವ ಅಸಂಘಟಿತ ಮಹಿಳೆಯರನ್ನು ಸಂಘಟಿಸಿ ಹೊಸತಾದ ಗುಂಪು ರಚಿಸಿ ಅವರಿಗೆ ಪಂಚಸೂತ್ರದ ಅಭ್ಯಾಸ ಮಾಡಿಸುವುದ.
- ಈ ಯೋಜನೆ/ ಕಾರ್ಯಕ್ರಮದ ಮೂಲಕ ಗ್ರಾಮೀಣ ಪ್ರದೇಶದ ಎಲ್ಲಾ ಬಡ ಮಹಿಳೆಯರನ್ನು ಜೊತೆಗೂಡಿಸಿ ಸ್ವಸಹಾಯ ಗುಂಪು, ಹಾಗೂ ವಿವಿಧ ಹಂತಗಳಲ್ಲಿ ಒಕ್ಕೂಟ ನಿರ್ಮಾಣ ಮಾಡುವುದು.
- ಹಣಕಾಸು ಸೇರ್ಪಡೆ–ಸ್ವಸಹಾಯ ಗುಂಪುಗಳಿಗೆ–ಬ್ಯಾಂಕಿನ ಸಂಪರ್ಕ ಕಲ್ಪಿಸಿ, ಆರ್ಥಿಕ ಸಾಕ್ಷರತೆ ಮತ್ತು ಬ್ಯಾಂಕಿಂಗ್‌ನಿಂದ ಹಿಡಿದು ಚಟುವಟಿಕೆಗಳವರೆಗೆ ಮಾಹಿತಿ ನೀಡಿ ಅದರ ಸದುಪಯೋಗ ಪಡೆಯುವಂತೆ ಮಾಡುವುದು.
- ಆರ್ಥಿಕ ಸೇರ್ಪಡೆ–ಜೀವನೋಪಾಯ ಉತ್ತೇಜನ–ಕೃಷಿ ಹಾಗೂ ಕೃಷಿಯೇತರ ಚಟುವಟಿಕೆಗಳನ್ನು ಅಧರಿಸಿದ ಉತ್ಪಾದನಾ ಅಥವಾ ಸೇವಾ ಚಟುವಟಿಕೆಗಳ ಬಗ್ಗೆ ಸೂಕ್ತ ಕೌಶಲ್ಯ ಸಹಾಯ ಮಾಡುವುದು.

ಅಧ್ಯಾಯ – 4

ಪಂಚಾಯತ್ ರಾಜ್ ಸಂಸ್ಥೆಗಳ ಬಲವರ್ಧನೆ

ರಾಷ್ಟ್ರದ ಮೂಲಭೂತ ಪ್ರಜಾಸತ್ತೆಗೆ ಅಡಿಪಾಯ ಒದಗಿಸುವ ಪಂಚಾಯತ್ ರಾಜ್ ಸಂಸ್ಥೆಗಳನ್ನು ಹೆಚ್ಚು ಹೆಚ್ಚು ಅಧಿಕಾರಯುಕ್ತ ಬಲಯುತಗೊಳಿಸಲು ಮತ್ತು ಪರಿಣಾಮಕಾರಿ ಪ್ರಜಾಪ್ರಭುತ್ವದ ಕನಸನ್ನು ಸಾಕಾರಗೊಳಿಸಲು ಸಂವಿಧಾನದ 73 ನೇ ತಿದ್ದುಪಡಿಗೆ ಅನುಗುಣವಾಗಿ ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯಿತಿಗಳಲ್ಲಿ ಪ್ರಜಾಸತಾತ್ಮಕ ವ್ಯವಸ್ಥೆಯನ್ನು ಮತ್ತಷ್ಟು ಬಲವರ್ಧನೆ ಮಾಡಲು ಮತ್ತು ಈ ಸಂಸ್ಥೆಗಳಲ್ಲಿ ಉತ್ತಮ ಜನಪರ ಆಡಳಿತ ವ್ಯವಸ್ಥೆಗೆ ಇಂಬುಕೊಡುವ ಉದ್ದೇಶದಿಂದ ರಾಜ್ಯದ ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಈ ಸಂವಿಧಾನದ ಆಶಯವನ್ನು ಅನುಷ್ಠಾನಗೊಳಿಸಲು ಅಣಿಗೊಳಿಸುವ ದಿಸೆಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳನ್ನು ಅಧಿಕಾರಯುತಗೊಳಿಸಲಾಗುತ್ತಿದೆ.

- **ಪಂಚಾಯತ್ ರಾಜ್:** ಪ್ರಜಾಸತ್ತಾತ್ಮಕ ವ್ಯವಸ್ಥೆಯ ಪಾಲ್ಗೊಳ್ಳುವಿಕೆ ಪ್ರಕ್ರಿಯೆ. ಬಲಯುತಗೊಳಿಸುವುದು.
  - ವಿಕೇಂದ್ರೀಕರಣದ ನೈಜ ಮತ್ತು ಪರಿಣಾಮಕಾರಿ ಫಲಗಳನ್ನು ಗ್ರಾಮೀಣ ಭಾಗಕ್ಕೆ ವರ್ಗಾಯಿಸುವ ಉದ್ದೇಶದಿಂದ ಗ್ರಾಮ ಪಂಚಾಯತಿಗಳ ಪುನರ್ ವಿಂಗಡಣೆ. 439+15=454 ಹೊಸ ಗ್ರಾಮ ಪಂಚಾಯತಿಗಳ ಸೇರ್ಪಡೆ.
  - 15,000ಕ್ಕೂ ಹೆಚ್ಚು ಜನಸಂಖ್ಯೆ ಹೊಂದಿರುವ 40 ಗ್ರಾಮ ಪಂಚಾಯತಿಗಳನ್ನು ಪಟ್ಟಣ ಪಂಚಾಯತಿಗಳಾಗಿ ಮೇಲ್ದರ್ಜೆಗೆ.
- 20 ವರ್ಷಗಳ ಅನುಭವದ ಆಧಾರದ ಮೇಲೆ ಪಂಚಾಯತ್ ರಾಜ್ ಸಂಸ್ಥೆಗಳ ಸಮಗ್ರ ಪುನರಾವಲೋಕನದ ಉದ್ದೇಶದಿಂದ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಗೆ ತಿದ್ದುಪಡಿ ತರಲು ವಿಧಾನಸಭೆಯ ಮಾನ್ಯ ಸದಸ್ಯರಾದ ಶ್ರೀ ಕೆ ಆರ್ ರಮೇಶಕುಮಾರ ರವರ ನೇತೃತ್ವದಲ್ಲಿ ಸಮಿತಿ ರಚನೆ. ಸಮಿತಿಯಿಂದ 88 ತಿದ್ದುಪಡಿಗಳಿಗೆ ಶಿಫಾರಸ್ಸು.
- ಈ ತಿದ್ದುಪಡಿಗಳ ಕುರಿತು ಸಮಗ್ರ ಅಧ್ಯಯನ ನಡೆಸಲು ಮತ್ತು ಸೂಕ್ತ ಶಾಸನಾತ್ಮಕ ತಿದ್ದುಪಡಿಯನ್ನು ಮಂಡಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ನೇತೃತ್ವದಲ್ಲಿ ಸಚಿವ ಸಂಪುಟದ ಉಪಸಮಿತಿ ರಚನೆ.
- **ಗ್ರಾಮ ಪಂಚಾಯತಿ ಚುನಾವಣೆಗೂ ಮುನ್ನ ಕೆಲ ಚುನಾವಣಾ ಸುಧಾರಣೆಗಳ ಅನುಷ್ಠಾನಕ್ಕಾಗಿ 5 ಪ್ರಮುಖ ಅಂಶಗಳನ್ನೊಳಗೊಂಡ ತಿದ್ದುಪಡಿ ಜಾರಿಗೆ.**
  - ಕಡ್ಡಾಯ ಮತದಾನ.
  - ನೋಟಾ.
  - ಪಂಚಾಯತ್‌ರಾಜ್ ಸಬಲೀಕರಣ ಮತ್ತು ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವಿಕೆ ಉತ್ತೇಜಿಸಲು ಕ್ರಮ.
  - ಅವಧಿ ಭದ್ರತೆ.
  - ಮಹಿಳೆಯರಿಗೆ ಶೇ 50ರಷ್ಟು ಮೀಸಲಾತಿ ಸುನಿಶ್ಚಿತಗೊಳಿಸುವ ಕ್ರಮ.
- **ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಣೆ ಪಾರದರ್ಶಕವಾಗಲು ಗ್ರಾಮ ಸಭೆಗಳ ವೀಡಿಯೋ ಚಿತ್ರೀಕರಣ.**
- **ಗ್ರಾಮ ಪಂಚಾಯತಿಯ ನೌಕರರಿಗೆ ಸೇವಾ ಭದ್ರತೆ:**
  - 1993ರಿಂದ ಗ್ರಾಮ ಪಂಚಾಯತಿಗಳಲ್ಲಿ ಸೇವೆ ಸಲ್ಲಿಸುತ್ತಿದ್ದ ಅನುಮೋದಿತವಲ್ಲದ ನೌಕರರ ಸೇವೆಗಳನ್ನು ಅನುಮೋದನೆಗೊಳಿಸಿ 27,000 ನೌಕರರಿಗೆ ಸೇವಾ ಭದ್ರತೆ ಒದಗಿಸಿರುವುದು.
  - ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಎಲ್ಲಾ ನೌಕರರಿಗೂ ಕನಿಷ್ಠ ವೇತನ ಜಾರಿ.

- ಅಧಿಕಾರ ವಿಕೇಂದ್ರಿಕರಣದ ನೈಜ ಪರಿಣಾಮಗಳು ಬಿಂಬಿತವಾಗುವ ಉದ್ದೇಶದಿಂದ ಜಿಲ್ಲಾ ಪಂಚಾಯತಿ ಉಪಕಾರ್ಯದರ್ಶಿಯಿಂದ ಕೆಳ ಹಂತದ ಅಧಿಕಾರಿಗಳ ಕಾರ್ಯನಿರ್ವಹಣಾ ವರದಿಗಳ ಪುನರಾವಲೋಕನದ ಪ್ರಾಧಿಕಾರದ ಜವಾಬ್ದಾರಿಯನ್ನು ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಪಂಚಾಯತಿ ಅಧ್ಯಕ್ಷರಿಗೆ ವಹಿಸಿದ ಕ್ರಾಂತಿಕಾರಿ ಕ್ರಮ.
- ಕರ್ನಾಟಕ ನಾಗರಿಕ ಸೇವಾ (ಕಾರ್ಯನಿರ್ವಹಣಾ ವರದಿಗಳು) 2009ರ ನಿಯಮಗಳು 11–12ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ವಿವಿದ ವೃಂದಗಳ ಅಧಿಕಾರಿಗಳ ಕಾರ್ಯನಿರ್ವಹಣಾ ವರದಿಗಳಿಗೆ ಸಂಬಂಧಿಸಿದಂತೆ ವರದಿ ಮಾಡುವ ಪ್ರಾಧಿಕಾರ, ಪರಿಶೀಲನಾ ಪ್ರಾಧಿಕಾರ, ಅಂಗೀಕಾರ ಪ್ರಾಧಿಕಾರ ಹಾಗೂ ಕಾರ್ಯನಿರ್ವಹಣಾ ವರದಿಗಳನ್ನು ಸಂರಕ್ಷಿಸುವ ಪ್ರಾಧಿಕಾರಗಳನ್ನು ಮರು ಗುರುತಿಸಿ ಜನಪ್ರತಿನಿದಿಗಳಿಗೆ ಅಧಿಕಾರ ನೀಡಿದ ದಿಟ್ಟ ಹೆಜ್ಜೆ.

- **ಇ–ಆಡಳಿತ: ಪಾರದರ್ಶಕತೆ**

ಆಡಳಿತದಲ್ಲಿ ಪಾರದರ್ಶಕತೆಯನ್ನು ಶೇ 100ರಷ್ಟು ಅನುಷ್ಟಾನಗೊಳಿಸಲು ವಿದ್ಯುನ್ಮಾನ ಆಡಳಿತಕ್ಕೆ ಆದ್ಯತೆ ನೀಡಲಾಯಿತು. ಯೋಜನೆಗಳ ಫಲಾನುಭವಿಗಳಿಗೆ ಹಾಗೂ ಗುತ್ತಿಗೆದಾರರಿಗೆ ಇಲಾಖೆಯ ಪಾವತಿಗಳನ್ನು ವಿದ್ಯುನ್ಮಾನ ಹಣ ನಿರ್ವಹಣೆ ಪದ್ದತಿಯ ಮೂಲಕ (ಇಎಫ್ಎಂಎಸ್) ನಿರ್ವಹಿಸಲಾಗುತ್ತಿದೆ. ಇಲಾಖೆಯಲ್ಲಿ ಇ–ಆಡಳಿತ ಕೋಶದ ಸ್ಥಾಪನೆಗೆ ಕ್ರಮ.

- ಪಾರದರ್ಶಕ ಆಡಳಿತ ನೀಡಲು ದೀರ್ಘಾವಧಿ ಕ್ರಮಗಳ ಅನುಷ್ಠಾನ.
- ಗಾಂಧೀ ಸಾಕ್ಷಿ ಕಾಯಕ ತಂತ್ರಾಂಶ ಶೇಕಡಾ 100 ರಷ್ಟು ಅನುಷ್ಠಾನ.
- ಇಲಾಖೆಯ ಪಾವತಿಗಳ ನಿರ್ವಹಣೆಯಲ್ಲಿ ಸೂಕ್ತ ಪದ್ಧತಿಯ ಅನುಷ್ಠಾನ

- **ಗ್ರಾಮೀಣ ರಸ್ತೆ:**
  - 2,247 ಕಿ.ಮೀ ಉದ್ದದ ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯ ಅನುಷ್ಠಾನ
  - 3,855 ಕಿ.ಮೀ ಉದ್ದದ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಅನುಷ್ಠಾನ
- **ತರಬೇತಿ ಮತ್ತು ಅಧ್ಯಯನ:** ರಾಜ್ಯದಲ್ಲಿ ಒಟ್ಟು 5 ಸ್ಯಾಟ್‌ಕಾಂ ಉಪಕೇಂದ್ರ ತೆರೆಯಲು ಮಂಜೂರಾತಿ.
  - ಬೆಂಗಳೂರು, ಧಾರವಾಡ, ದಾವಣಗೆರೆ, ಮಂಗಳೂರು ಮತ್ತು ಕಲಬುರ್ಗಿಯಲ್ಲಿ ಈ ಕೇಂದ್ರಗಳ ಸ್ಥಾಪನೆ.
  - ಬೆಂಗಳೂರು ಸ್ಯಾಟ್‌ಕಾಂ ಕೇಂದ್ರ ಕಾರ್ಯಾರಂಭ.
  - ಗ್ರಾಮೀಣ ಅಭಿವೃದ್ಧಿ ಅಧ್ಯಯನ ವಿಶ್ವವಿದ್ಯಾನಿಲಯದ ಸ್ಥಾಪನೆ.
  - ಗ್ರಾಮೀಣ ಬದುಕಿನ ಉನ್ನತ ಅಧ್ಯಯನಕ್ಕೆ ಚಾಲನೆ.
- **ಇ–ಪಂಚಾಯತ್:**

- ಗಾಂಧಿ ಸಾಕ್ಷೀ ಕಾಯಕ ತಂತ್ರಾಂಶದ ಮೂಲಕವೇ ಇಲಾಖೆಯ ಎಲ್ಲ ಯೋಜನೆಗಳನ್ನು ಅನುಷ್ಟಾನಗೊಳಿಸಲಾಗುತ್ತಿದೆ.
- ಗ್ರಾಮ ಪಂಚಾಯತಿಗಳಲ್ಲಿ ಪಂಚತಂತ್ರ ವ್ಯವಸ್ಥೆ ಇರುವುದರಿಂದ ಗ್ರಾಮಸ್ಥರಿಗೆ ಅವಶ್ಯವಾಗುವ ಎಲ್ಲಾ ದಾಖಲೆಗಳನ್ನು ಗಣಕೀಕರಿಸಿಕೊಳ್ಳುವುದು ಹಾಗೂ ಇ-ಸ್ವತ್ತಿನಡಿ ದಾಖಲೆಗಳನ್ನು ವಿತರಿಸುವುದರಿಂದ ನಕಲಿ ದಾಖಲಾತಿಯ ವಿತರಣೆಗಳನ್ನು ತಡೆಗಟ್ಟಬಹುದಾಗಿದೆ. ಕಾವೇರಿ ತಂತ್ರಾಂಶ ಮತ್ತು ಗ್ರಾಮ ಪಂಚಾಯತಿ ವ್ಯಾಪ್ತಿಯ ಸ್ವತ್ತುಗಳಿಗಾಗಿ ಇರುವ ಇ–ಸ್ವತ್ತು ತಂತ್ರಾಂಶವನ್ನು ಸಂಯೋಜನೆಗೊಳಿಸಲಾಗಿದೆ.

ಅಧ್ಯಾಯ – 5

ಸಾಧನೆಯ ಹಾದಿಯಲ್ಲಿ ಮೈಲಿಗಲ್ಲುಗಳು

1. ಕುಡಿಯುವ ನೀರು ಮತ್ತು ನೈರ್ಮಲ್ಯದ ವಿಷಯಗಳನ್ನು ಆದ್ಯತೆಯ ಮೇಲೆ ವ್ಯವಹರಿಸಲು ಪ್ರತ್ಯೇಕ ಇಲಾಖೆಯ ಸೃಜನೆ.
2. 2013–14ನೇ ಸಾಲಿನಲ್ಲಿ ಗ್ರಾಮ ಪಂಚಾಯತಿಗಳ ಶಾಸನ ಬದ್ಧ ಅನುದಾನಕ್ಕಾಗಿ ರೂ. 57834/–ಲಕ್ಷಗಳನ್ನು ಒದಗಿಸಲಾಗಿದೆ. ಇದನ್ನು ಗ್ರಾಮ ಪಂಚಾಯತಿಗಳ ಜನಸಂಖ್ಯೆ ಅನುಸಾರ ಕನಿಷ್ಠ ರೂ. 10 ರಿಂದ 12 ಲಕ್ಷಗಳನ್ನು ಪ್ರತಿ ಗ್ರಾಮ ಪಂಚಾಯತಿಗೆ ಬಿಡುಗಡೆ ಮಾಡಲಾಗುತ್ತದೆ.
3. ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಪ್ರತಿ ತಾಲ್ಲೂಕು ಪಂಚಾಯತಿಗೆ 1 ಕೋಟಿ ರೂ. ಗಳನ್ನು ಬಿಡುಗಡೆ ಮಾಡಲಾಗುತ್ತಿದ್ದು, 2014–15ನೇ ಸಾಲಿನಿಂದ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ಜನಸಂಖ್ಯೆಯನ್ನಾಧರಿಸಿ ಒಟ್ಟಾರೆ ರೂ. 85 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದೆ.
4. ಅತಿ ಹಿಂದುಳಿದ ಜಿಲ್ಲೆಗಳಿಗೆ ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ನಿಧಿಯಿಂದ ವಿಶೇಷ ಅನುದಾನ (ಆರು ಜಿಲ್ಲೆಗಳಿಗೆ) ಹಾಗೂ ಕೇಂದ್ರ ಸರ್ಕಾರದ 13ನೇ ಹಣಕಾಸು ಯೋಜನೆಯಡಿ ಪ್ರತಿ ಜಿಲ್ಲಾ, ತಾಲ್ಲೂಕು ಹಾಗೂ ಗ್ರಾಮ ಪಂಚಾಯತಿಗಳಿಗೆ ಅಭಿವೃದ್ಧಿ ಅನುದಾನದವನ್ನು ಬಿಡುಗಡೆ ಮಾಡಲಾಗುತ್ತಿದೆ. 2014–15 ನೇ ಸಾಲಿಗೆ 753 ಕೋಟಿ ರೂ.ಗಳ ಮೂಲ ಅನುದಾನ ಹಾಗೂ 223 ಕೋಟಿ ರೂ.ಗಳ ಉತ್ತಮ ನಿರ್ವಹಣೆಗಾಗಿ ನಿರ್ವಹಣಾ ಅನುದಾನ ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುತ್ತದೆ.
5. ಈ ಯೋಜನೆಯಡಿ "ಅಧಿಕಾರ ವಿಕೇಂದ್ರಿಕರಣದ ಸೂಚ್ಯಂಕದಡಿ 2013–14ನೇ ಸಾಲಿಗೆ ಕರ್ನಾಟಕ ರಾಜ್ಯವು ರಾಷ್ಟ್ರದಲ್ಲಿ ಮೂರನೇ ಶ್ರೇಯಾಂಕ ಪಡೆದು ರಾಷ್ಟ್ರ ಪ್ರಶಸ್ತಿಯ '2 ಕೋಟಿಗಳನ್ನು ಗಳಿಸಿರುವುದರ ಜೊತೆಗೆ "ಪಂಚಾಯತ್ ಸಶಕ್ತೀಕರಣ ಪುರಸ್ಕಾರ ಯೋಜನೆ"ಯಡಿ ರಾಜ್ಯದ ಕೆಳಕಂಡ ಪಂಚಾಯತ್ ರಾಜ್ ಸಂಸ್ಥೆಗಳಿಗೆ ನಗದು ಪ್ರಶಸ್ತಿಯನ್ನು ಪಡೆಯಲಾಗಿದೆ.
6. ಬೀದರ್ ತಾಲ್ಲೂಕಿನ ಅಣದೂರು ಗ್ರಾಮ ಪಂಚಾಯತಿಗೆ 2014 ನೇ ಸಾಲಿನ " ರಾಷ್ಟ್ರೀಯ ಗೌರವ ಗ್ರಾಮ ಸಭಾ ಪುರಸ್ಕಾರ" ಹಾಗೂ ನಗದು ಪ್ರಶಸ್ತಿ 10 ಲಕ್ಷಗಳನ್ನು ಪಡೆಯಲಾಗಿದೆ.
7. ಪಂಚಾಯತ್ ರಾಜ್ ಸಂಸ್ಥೆಯ ಎಲ್ಲಾ ಆಡಳಿತ ಕಛೇರಿಗಳ ಮೇಲೆ "ರಾಷ್ಟ್ರಧ್ವಜ"ವನ್ನು ಪ್ರತಿನಿತ್ಯ ಹಾರಾಡಿಸುವ ಮೂಲಕ ರಾಷ್ಟ್ರೀಯತೆ, ಭಾವೈಕ್ಯತೆ ಹಾಗೂ ಸಾಮಾಜಿಕ ಸಮನ್ವಯತೆಯನ್ನು ಉತ್ತೇಜಿಸಲಾಗುತ್ತಿದೆ.
8. ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಅನಧಿಕೃತ ಬಡಾವಣೆ ಸೃಜನೆಯನ್ನು ನಿಯಂತ್ರಿಸಲು ಹಾಗೂ ಗ್ರಾಮ ಪಂಚಯತಿ ವ್ಯಾಪ್ತಿಯ ಆಸ್ತಿಗಳನ್ನು ಕ್ರಮಬದ್ಧಗೊಳಿಸಲು "ಇ–ಸ್ವತ್ತು" ತಂತ್ರಾಂಶವನ್ನು ಅಳವಡಿಸಿಕೊಳ್ಳಲಾಗಿದೆ.
9. ಚುನಾಯಿತ ಪ್ರತಿನಿಧಿಗಳ ಸಾಮರ್ಥ್ಯಾಭಿವೃದ್ಧಿಗೊಳಿಸಲು ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳ ಮತ್ತು ಇತರೆ ಅಭಿವೃದ್ಧಿ ಇಲಾಖೆಯ ಅಧಿಕಾರಿ/ನೌಕರರುಗಳಿಗೆ ವಿವಿಧ ಯೋಜನೆಗಳ ಬಗ್ಗೆ ತರಬೇತಿ ನೀಡುತ್ತಿರುವ ಮೈಸೂರಿನ ಅಬ್ದುಲ್ ನಜೀರ್ ಸಾಬ್ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಮೇಲಿರುವ ಒತ್ತಡವನ್ನು ಕಡಿಮೆಗೊಳಿಸಲು ಗುಲ್ಬರ್ಗಾ ಮತ್ತು ಧಾರವಾಡದಲ್ಲಿ ಪ್ರಾದೇಶಿಕ ತರಬೇತಿ ಕೇಂದ್ರಗಳನ್ನು ಹಾಗೂ ಬೆಂಗಳೂರಿನಲ್ಲಿ ಪ್ರಾಂತಿಯ ಸಂಶೋಧನ ಮತ್ತು ತರಬೇತಿ ಕೇಂದ್ರವನ್ನು ಸ್ಥಾಪಿಸಲಾಗಿದೆ. ಉಪಗ್ರಹ ಆಧಾರಿತ ತರಬೇತಿ ಕೇಂದ್ರವು ಬೆಂಗಳೂರಿನಲ್ಲಿ ಕಾರ್ಯಾರಂಬಮಾಡಿದ್ದು, ಮಂಗಳೂರು, ಧಾರವಾಡ ಹಾಗೂ ಗುಲ್ಬರ್ಗಾ ಕೇಂದ್ರಗಳಲ್ಲೂ ಸ್ಥಾಪಿಸಲು ಉದ್ದೇಶಿಸಲಾಗಿದೆ.
10. **ಬಯೋಮೆಟ್ರಿಕ್ ವ್ಯವಸ್ಥೆ:–** ರಾಜ್ಯದ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿ



ಕಛೇರಿಗಳಲ್ಲಿ ಅಧಿಕಾರಿ/ನೌಕರರ ಹಾಜರಾತಿ, ಕಾರ್ಯನಿರ್ವಹಣೆ ಮತ್ತು ಶಿಸ್ತು ಪಾಲನೆಮಾಡಲು ಬಯೋಈಮೆಟ್ರಿಕ್ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಪ್ರಸ್ತುತ ರಾಜ್ಯದಲ್ಲಿ 5629 ಗ್ರಾಮ ಪಂಚಾಯತಿಗಳು ಮತ್ತು 30 ಜಿಲ್ಲಾ ಪಂಚಾಯತಿಗಳಲ್ಲಿ ಬಯೋಮೆಟ್ರಿಕ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

11. **ಗಾಂಧಿ ಗ್ರಾಮ ಪುರಸ್ಕಾರ ಯೋಜನೆ:-** ರಾಜ್ಯದಲ್ಲಿ ಉತ್ತಮ ಆಡಳಿತ ಮತ್ತು ಆರ್ಥಿಕ ಸಾಧನೆ ಮಾಡಿರುವ ಗ್ರಾಮ ಪಂಚಾಯತಿಗಳನ್ನು ಗುರುತಿಸಿ ಅವುಗಳ ಕಾರ್ಯನಿರ್ವಹಣೆಯನ್ನು ಮತ್ತುಷ್ಟು ಪ್ರೋತ್ಸಾಹಿಸುವ ನಿಟ್ಟಿನಲ್ಲಿ "ಗಾಂಧಿ ಗ್ರಾಮ ಪುರಸ್ಕಾರ ಯೋಜನೆ ಜಾರಿಗೆ ತರಲಾಗಿದೆ". ಪ್ರತಿ ತಾಲ್ಲೂಕಿನಲ್ಲಿ ಉತ್ತಮ ಸಾಧನೆ ಮಾಡಿರುವ ಒಂದು ಗ್ರಾಮ ಪಂಚಾಯತಿಯನ್ನು ಗುರುತಿಸಿ ತಲಾ '5.00 ಲಕ್ಷಗಳ ಅನುದಾನ ನೀಡಲಾಗುವುದು.

12. **ಮಹಿಳೆಯರಿಗಾಗಿ ವಿಶೇಷ ಗ್ರಾಮ ಸಭೆ:-** ಮಹಿಳೆಯರ ರಾಜಕೀಯ ನಾಯಕತ್ವ, ಲಿಂಗ ಸಮಾನತೆ, ಮಹಿಳಾ ಫಲಾನುಭವಿಗಳನ್ನು ಸೂಕ್ತವಾಗಿ ಆಯ್ಕೆ ಮಾಡಲು ಮತ್ತು ಚುನಾಯಿತ ಮಹಿಳಾ ಪ್ರತಿನಿಧಿಗಳ ಸಾಮರ್ಥ್ಯವನ್ನು ಹೆಚ್ಚಿಸುವ ಹಾಗೂ ವಿವಿಧ ಯೋಜನೆಗಳಲ್ಲಿ ಅವರುಗಳನ್ನು ತೊಡಗಿಸಿಕೊಳ್ಳುವ ಸಲುವಾಗಿ ವಿಷಯವನ್ನು ಆಧ್ಯತೆಯ ಮೇರೆಗೆ ಗ್ರಾಮ ಸಭೆಯಲ್ಲಿ

ಮಂಡಿಸಿ ಸೂಕ್ತ ನಿರ್ಣಯವನ್ನು ತೆಗೆದುಕೊಂಡು ಸಂಬಂಧಪಟ್ಟ ಮಹಿಳಾ ಪ್ರತಿನಿಧಿಗಳಿಗೆ ಸೂಕ್ತ ತಿಳುವಳಿಕೆ ನೀಡುವ ಅವಶ್ಯಕತೆ ಇರುತ್ತದೆ. ಹೀಗಾಗಿ, ಮಹಿಳೆಯರಿಗಾಗಿ ವಿಶೇಷ ಗ್ರಾಮ ಸಭೆಗಳನ್ನು ಗ್ರಾಮ ಪಂಚಾಯತಿಗಳು ಕಡ್ಡಾಯವಾಗಿ ನಡೆಸುವಂತೆ ಎಲ್ಲಾ ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚಿಸಲಾಗಿದೆ.

13.. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಅಧ್ಯಯಿಸಲು ಹಾಗೂ ಹೊಸ ಯೋಜನೆಗಳನ್ನು ಜಾರಿಗೆ ತರಲು ರಾಷ್ಟ್ರದಲ್ಲಿಯೇ ಮೊದಲ ಬಾರಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವ ವಿದ್ಯಾನಿಲಯವನ್ನು ಸ್ಥಾಪಿಸುವಂತಹ ಕ್ರಾಂತಿಕಾರಕ ಹೆಜ್ಜೆಯನ್ನು ಸರ್ಕಾರ ರೂಪಿಸಿದೆ.


14. ಗ್ರಾಮ ಪಂಚಾಯತಿಗಳ ಪುನರ್ ವಿಂಗಡಣಾ ಸಮಿತಿಯನ್ನು ರಚಿಸಲಾಗಿದ್ದು, ಸಮಿತಿಯ ಶಿಫಾರಸ್ಸಿನ ಅನುಸಾರ ರಾಜ್ಯದಲ್ಲಿ ಈಗಾಗಲೇ ಇರುವ ಗ್ರಾಮ ಪಂಚಾಯತಿಗಳ ಜೊತೆಗೆ ಹೆಚ್ಚುವರಿಯಾಗಿ ಒಟ್ಟು 454 ಹೊಸ ಗ್ರಾಮ ಪಂಚಾಯತಿಗಳನ್ನು ಸರ್ಕಾರ ರಚಿಸಿರುತ್ತದೆ.

15. ಕರ್ನಾಟಕದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಮತ್ತಷ್ಟು ಸದೃಢಗೊಳಿಸಲು ಬಲ ಮತ್ತು ಅದರ ಕಾರ್ಯವಿಧಾನಗಳನ್ನು ಸರಳೀಕರಣಗೊಳಿಸಲು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಹಲವು ಪ್ರಕರಣಗಳಿಗೆ ಸೂಕ್ತ ತಿದ್ದುಪಡಿಗಳನ್ನು ತರಲು ಉನ್ನತ ಮಟ್ಟದ ತಜ್ಞರ ಸಮಿತಿಯ ಶಿಫಾರಸ್ಸುಗಳನ್ನು ಪರಿಶೀಲಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ನೇಮಕಗೊಂಡಿದ್ದ ಸಚಿವ ಸಂಪುಟದ ಉಪ ಸಮಿತಿ ತನ್ನ ವರದಿಯನ್ನು ಸಚಿವ ಸಂಪುಟಕ್ಕೆ ಸಲ್ಲಿಸಿದೆ.

16. ಕರ್ನಾಟಕವು ಅಧಿಕಾರ ವಿಕೇಂದ್ರೀಕರಣ ನೀತಿಗಳು ಸೂಚ್ಯಂಕದಡಿ ರಾಷ್ಟ್ರ ಮಟ್ಟದಲ್ಲಿ ಎರಡನೇ ಶ್ರೇಣಿಯನ್ನು, ಅದೇ ರೀತಿ ಹಣಕಾಸು ವಿಕೇಂದ್ರೀಕರಣ ನೀತಿ ನಿರೂಪಣೆಗಳಲ್ಲಿ ರಾಷ್ಟ್ರ ಮಟ್ಟದಲ್ಲಿ ಅಗ್ರ ಸ್ಥಾನವನ್ನು ಹಾಗೂ ಅಧಿಕಾರ ವಿಕೇಂದ್ರೀಕರಣ/ ಪಂಚಾಯತ್ ರಾಜ್ ವ್ಯವಸ್ಥೆಯ ಒಟ್ಟಾರೆ ಸಾಧನೆಗಾಗಿ ಕರ್ನಾಟಕವು 2014–15ನೇ ಆರ್ಥಿಕ ಸಾಲಿಗೆ ರಾಷ್ಟ್ರ ಮಟ್ಟದಲ್ಲಿ 3ನೇ ಶ್ರೇಣಿಯೊಂದಿಗೆ ಪುರಸ್ಕರಿಸಲ್ಪಟ್ಟಿದೆ.

17. ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯವು "ಪಂಚಾಯತ್ ಸಶಕ್ತೀಕರಣ ಪುರಸ್ಕಾರ" ಯೋಜನೆಯಡಿ ಉತ್ತಮ ಕಾರ್ಯಸಾಧನೆ ಮಾಡಿರುವ ರಾಜ್ಯದ ಪಂಚಾಯತ್ ಸಂಸ್ಥೆಗಳಾದ ಚಿಕ್ಕಮಗಳೂರು ಜಿಲ್ಲಾ ಪಂಚಾಯತಿ; ಮುಳಬಾಗಿಲು, ಹೊಸದುರ್ಗ ಮತ್ತು ಸೇಡಂ ತಾಲ್ಲೂಕು ಪಂಚಾಯತಿಗಳು ಹಾಗು ಗುಮ್ಮಗೋಳ(ದಾರವಾಢ), ಗಾಜನೂರು(ಶಿವಮೊಗ್ಗ), ಕೊಯ್ಲ(ದಕ್ಷಿಣ ಕನ್ನಡ) ಮತ್ತು ಕಣ್ಣೂರು (ಬೆಂಗಳೂರು ನಗರ) ಗ್ರಾಮ ಪಂಚಾಯತಿಗಳನ್ನು ನಗದು ಬಹುಮಾನದೊಂದಿಗೆ ಪುರಸ್ಕರಿಸಿದೆ.

"ಭಯ ಮುಕ್ತ, ತಾಜ್ಯ ಮುಕ್ತ, ವ್ಯಾಜ್ಯ ಮುಕ್ತ, ಬಯಲು ಬಹಿರ್ದೆಸೆ ಮುಕ್ತ ಹಳ್ಳಿಗಳು ಮಾತ್ರ ಉತ್ತಮ ರಾಷ್ಟ್ರ ನಿರ್ಮಾಣ ಮಾಡಬಲ್ಲವು."



ಪ್ರಕಟಣೆ : ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
17, 'ವಾರ್ತಾ ಸೌಧ', ಭಗವಾನ್ ಮಹಾವೀರ ರಸ್ತೆ (ಇನ್‌ಫೆಂಟ್ರಿ ರಸ್ತೆ), ಬೆಂಗಳೂರು-560 001
ದೂ : 080 2202 8001/02 | ಇಮೇಲ್ : directorinformation.gov@gmail.com

ಕರ್ನಾಟಕ ವಾರ್ತೆ
www.karnatakavarthe.org